# ಉಡುಪಿ ಜಿಲ್ಲೆಯ ಪ್ರವಾಸಿ ತಾಣಗಳು

ಪೂರ್ವದ ಸಹ್ಯಾದ್ರಿ ಮತ್ತು ಪಶ್ಚಿಮದ ಅರಬ್ಬೀ ಸಮುದ್ರದ ನಡುವಿನ ಪರಶುರಾಮ ಸೃಷ್ಠಿಯ ಪ್ರಕೃತಿ ರಮ್ಯ ತಾಣವೇ ಉಡುಪಿ ಜಿಲ್ಲೆಯಾಗಿದೆ. ಸುಂದರವಾದ ಈ ಜಿಲ್ಲೆ ೩೫೭೫ ಚದುರ ಕಿ.ಮೀ. ವಿಸ್ತೀರ್ಣದ ಭೂಪ್ರದೇಶವನ್ನು ಒಳಗೊಂಡಿದೆ. ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕನ್ನು  ಒಳಗೊಂಡ ಈ ಜಿಲ್ಲೆ ವಿಶ್ವಮಾನ್ಯತೆಯನ್ನು ಪಡೆದಿದೆ. ಆಧ್ಯಾತ್ಮಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಎಲ್ಲಾ ಕ್ಷೇತ್ರಗಳಲ್ಲಿ ಯಶಸ್ಸಿನ ದಾಪುಗಾಲು ಇಟ್ಟು; ಅಭಿವೃದ್ಧಿ ಪಥದತ್ತ ಈ ಜಿಲ್ಲೆ ಸಾಗುತ್ತಿದೆ.

ಉಡುಪಿ ತುಳುವಿನ "ಒಡಿಪು" ಎಂಬ ಪದದಿಂದ ಬಂದಿದೆ. ಉಡುಪಿಗೆ ಸಂಸ್ಕೃತದಲ್ಲಿ ರಜತ ಪೀಠ ಎಂದು ಕರೆಯುತ್ತಾರೆ. ಪರಶುರಾಮ ಕ್ಷೇತ್ರದ ಏಳು ಪುಣ್ಯ ಕ್ಷೇತ್ರಗಳಲ್ಲಿ ರಜತ ಪೀಠವೂ ಒಂದಾಗಿದೆ. ಇನ್ನುಳಿದ ಕುಂಭಾಶಿ, ಕೋಟೇಶ್ವರ, ಶಂಕರನಾರಾಯಣ, ಕೊಲ್ಲೂರು ಈ ಜಿಲ್ಲೆಯಲ್ಲಿದೆ. ಉಳಿದ ಗೋಕರ್ಣವು ಉತ್ತರ ಕನ್ನಡ ಜಿಲ್ಲೆಯಲ್ಲೂ, ಕುಕ್ಕೆಸುಬ್ರಹ್ಮಣ್ಯವು ದಕ್ಷಿಣ ಕನ್ನಡ ಜಲ್ಲೆಯಲ್ಲೂ ಇದೆ.

ಶಾಷನಗಳ ಪ್ರಕಾರ ಆಳುಪರು, ಹೊಯ್ಸಳರು, ವಿಜಯನಗರದ ಅರಸರು, ಕೆಳದಿಯ ಅರಸರು, ಮೈಸೂರಿನ ಸುಲ್ತಾನರು ಈ ಜಲ್ಲೆಯನ್ನು ಆಳಿರುತ್ತಾರೆ. ಕ್ರಿ.ಶ. ೧೭೯೯ ರಲ್ಲಿ ಟಿಪ್ಪುವಿನ ಮರಣಾ ನಂತರ ಈ ಜಿಲ್ಲೆ ಬ್ರಿಟಿಷರ ಕೈವಶವಾಗಿ ಮದ್ರಾಸ್ ಪ್ರಾಂತೀಯ ಸರ್ಕಾರದ ಆಡಳಿತಕ್ಕೆ ಒಳಪಟ್ಟಿತು. ೧೯೫೬ ರಲ್ಲಿ ಭಾಷಾವಾರು ಪ್ರಾಂತ್ಯಗಳು ಉದಯವಾದಾಗ ಮೈಸೂರು ರಾಜ್ಯಕ್ಕೆ ಸೇರಿತು. ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಉಡುಪಿ ೨೫-೦೮-೧೯೯೭ ರಂದು ಹೊಸ ಜಿಲ್ಲೆಯಾಯಿತು. ಈ ಜಲ್ಲೆಯಲ್ಲಿ ೯ ಹೋಬಳಿಗಳಿವೆ. ಉಡುಪಿ ನಗರ ಸಭೆ, ಕುಂದಾಪುರ ಮತ್ತು ಕಾರ್ಕಳ ಪುರಸಭೆ, ಸಾಲಿಗ್ರಾಮ ಪಟ್ಟಣ ಪಂಚಾಯತ್ ಆಗಿದೆ. ೧೪೬ ಗ್ರಾಮ ಪಂಚಾಯಿತಿಯನ್ನು ಒಳಗೊಂಡಿರುವ ಉಡುಪಿ ಜಿಲ್ಲೆಯಲ್ಲಿ ಜನಸಾಂದ್ರತೆ ಪ್ರತೀ ಕಿ.ಮೀಗೆ ೨೯೦ ಆಗಿರುತ್ತದೆ. ಮುದ್ರಣ, ಹೋಟೆಲ್, ಹೆಂಚಿನ ಕಾರ್ಖಾನೆ, ಗೇರು ಬೀಜ, ಮೀನು ಸಂಸ್ಕರಣೆ, ಪಿವಿಸಿ ಪೈಪ್, ಅಕ್ಕಿಗಿರಣಿ ಹಾಗೂ ಇಂಟರ್ ಲಾಕ್ ಪೇವರ್ಸ್ ಪ್ರಮುಖ ಉದ್ಯಮಗಳಾಗಿವೆ.

೨೦೧೧ ರ ಜನಗಣತಿಯ ಪ್ರಕಾರ ೧೧,೭೭,೯೦೮ ಜನಸಂಖ್ಯೆಯುಳ್ಳ ಉಡುಪಿ ಜಿಲ್ಲೆಯು ೧೦೫ ಕಿ.ಮೀ. ಉದ್ದದ ಕರಾವಳಿಯನ್ನು ಹೊಂದಿದೆ. ಶೇಕಡಾ ೮೦ ರಷ್ಟು ಜನ ಇಲ್ಲಿ ಸಾಕ್ಷರರಾಗಿದ್ದಾರೆ. ಈ ಜಿಲ್ಲೆಯನ್ನು ಪ್ರಾಕೃತಿಕವಾಗಿ ಕರಾವಳಿ ಪ್ರದೇಶ, ಒಳನಾಡು ಪ್ರದೇಶ, ಪಶ್ಚಿಮ ಘಟ್ಟಗಳ ಪ್ರದೇಶವೆಂದು ೩ ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಭತ್ತ, ದ್ವಿದಳ ಧಾನ್ಯ, ಕಬ್ಬು, ನೆಲಗಡಲೆ, ರಬ್ಬರ್, ಅಡಿಕೆ ಮತ್ತು ತೆಂಗು ಪ್ರಮುಖ ಬೆಳೆಗಳಾಗಿವೆ. ಸೀತಾ, ಸ್ವರ್ಣ, ವಾರಾಹಿ, ಗಂಗೊಳ್ಳಿ ಪ್ರಮುಖ ನದಿಗಳಾಗಿವೆ. ಚಕ್ರ ಕುಬ್ಜ, ಸೌಪರ್ಣಿಕಾ ಇತರ ನದಿಗಳು.

**ಉಡುಗೆ – ತೊಡುಗೆ:** ಬಿಸಿಲ ಬೇಗೆ ಮತ್ತು ಬೆವರುವಿಕೆ ಪ್ರಮಾಣ ಜಾಸ್ತಿ ಇರವುದರೆಂದ ಹತ್ತಿ ಬಟ್ಟೆಗಳನ್ನು ಆಯ್ಕೆ ಮಾಡಿಕಳ್ಳುವುದು  ಈ ಪ್ರದೇಶದಲ್ಲಿ ಸೂಕ್ತವಾಗಿದೆ. ತರುಣರು ಹೆಚ್ಚಾಗಿ ಪ್ಯಾಂಟ್-ಶರ್ಟ್, ತರುಣಿಯರು ಚೂಡಿದಾರ, ಜೀನ್ಸ್ ಧರಿಸುತ್ತಾರೆ. ಮಹಿಳೆಯರು ಸೀರೆ, ವಯೋವೃದ್ಧರು ಧೋತಿ ಹಾಗೂ ವೃದ್ಧೆಯರು ಸೀರೆ ಧರಿಸುತ್ತಾರೆ.

**ವಾಯುಗುಣ:** ಮಾರ್ಚ್ ಏಪ್ರಿಲ್ ಮೇ ನಲ್ಲಿ ಬಿಸಿ ಬೇಸಿಗೆ, ಜೂನ್ ಜುಲೈ ಆಗಸ್ಟ್‌ನಲ್ಲಿ ಮಾನ್ಸೂನ್‌ನಿಂದ ಧಾರಾಕಾರ ಮಳೆ, ಸಪ್ಟೆಂಬರ್ ಅಕ್ಟೋಬರ್ ರಮ್ಯಕಾಲ, ನವಂಬರ್ ಡಿಸೆಂಬರ್ ತಂಪು, ಜನವರಿ ಫೆಬ್ರವರಿ ಚಳಿ ಅನುಭವ.

ಆಹಾರ: ಉಡುಪಿ ಅಡುಗೆ ವಿಶ್ವ ಪ್ರಸಿದ್ಧ. ಇಡ್ಲಿ ವಡೆ-ದೋಸೆ- ಹೋಟೆಲುಗಳಲ್ಲಿ ಜನಪ್ರಿಯ ಹೊಳಿಸಿದ ಕೀರ್ತಿ ಉಡುಪಿಗೆ ಸಲ್ಲಬೇಕು. ಕುಸಬಲಕ್ಕಿ ಅನ್ನವನ್ನು ಹೆಚ್ಚಾಗಿ ಬಳಸುತ್ತಾರೆ. ಪತ್ರೋಡೆ, ಕೊಟ್ಟೆಕಡಬು, ಓಲೆ ಕಡುಬು, ಶಾವಿಗೆ, ಹಾಲ್‌ಬಾಯಿ, ಹೋಳಿಬಜೆ,

ನೇರುದೋಸೆ, ಪುಂಡಿ, ಖಾರದೋಸೆ, ಮಸಾಲೆದೋಸೆ, ಕೋಳಿರೊಟ್ಟಿ ಇವು ಗ್ರಾಮೀಣ ತಿನಿಸುಗಳಾಗಿವೆ. ತುಳು ಶಿವಳ್ಳಿ ಬ್ರಾಹ್ಮಣರ ಅಡುಗೆ, ಕೊಂಕಣಿ ಸುಮುದಾಯದವರ ಅಡುಗೆ, ಬಂಟರ ಬಗೆ ಬಗೆಯ ಅಡುಗೆಯ ಶೈಲಿ ಜನಪ್ರಿಯವಾಗಿವೆ.

**ಸಸ್ಯ ಸಂಪತ್ತು:** ತೆಂಗು, ಕಂಗು, ಮಾವು, ಹಲಸು, ಗೇರು ಯಥೇಚ್ಛವಾಗಿದೆ. ಸುಮಾರು ೧,೨೨,೧೩೨ ಹೆಕ್ಟೇರು ಪ್ರದೇಶಗಳಲ್ಲಿ ವ್ಯವಸಾಯ ಮಾಡುತ್ತಾರೆ, ಭತ್ತ, ಉದ್ದು, ಹುರುಳಿ, ಹೆಸರು, ಅಲಸಂದೆ, ಅವಡೆ, ನೆಲಗಡಲೆ, ಎಳ್ಳು, ರಬ್ಬರ್, ಅಡಿಕೆ, ಕೋಕೋ, ಬಾಳೆ, ಮಾವು, ಸಿಹಿಜೇನು, ಶುಂಠಿ, ವೀಳ್ಯದೆಲೆ, ಕರಿಮೆಣಸು, ಕಬ್ಬು, ಮಟ್ಟಿಗುಳ್ಳ (ಬದನೆ), ಹಸಿವೆಣಸು, ಬೆಂಡೆ, ಸೌತೆ, ಕಲ್ಲಂಗಡಿ, ಇತ್ಯಾದಿಗಳನ್ನು ಬೆಳೆಸುತ್ತಾರೆ.

**ಉದ್ದಿಮೆ:** ಜಿಲ್ಲೆಯಲ್ಲಿ ೨ ಬಟ್ಟೆ, ೫ ರಾಸಾಯನಿಕ, ೨ ಇಂಜಿನೀಯರಿಂಗ್ ಇವುಗಳು ಸೇರಿದಂತೆ ಸುಮಾರು ೨೬೧ ಕೈಗಾರಿಕೆಗಳಿವೆ. ಅಟೋಮೋಬೈಲ್, ಇಲೆಕ್ಟ್ರಿಕಲ್, ಕೆಮಿಕಲ್, ಆಹಾರ ತಯಾರಿಕೆ ಸೇರಿದಂತೆ,ಸುಮಾರು ೨,೪೫೦ ಉದ್ದಿಮೆಗಳಿವೆ. ಸುಮಾರು ೧೫,೫೦೦ಕ್ಕೂ ಹೆಚ್ಚು ಉದ್ಯೋಗಿಗಳು ಇದ್ದಾರೆ.

**ಪ್ರಾಣಿ – ಪಕ್ಷಿಗಳು:** ಪಶ್ಚಿಮ ಘಟ್ಟದಲ್ಲಿ ವನ್ಯ ಜೀವಿಗಳಾದ ಹುಲಿ, ಚಿರತೆ, ಆನೆ, ಜಿಂಕೆ, ಕಾಡುಕೋಣ, ನಾಗರಹಾವು, ಕಾಳಿಂಗ ಸರ್ಪ, ನವಿಲು, ಮಂಗ, ಕಾಗೆ, ಗೂಬೆ, ಗಿಳಿ, ಬಾವುಲಿ ಮುಂತಾದ ವಿವಿಧ ಜಾತಿ ಪ್ರಾಣಿ ಪಕ್ಷಿಗಳಿವೆ. ಸೋವೇಶ್ವರ ಮತ್ತು ಮೂಕಾಂಬಿಕಾ ಅಭಯಾರಣ್ಯಗಳು ಆಶ್ರಿತ ತಾಣಗಳಾಗಿವೆ.

**ಪತ್ರಿಕಾ ರಂಗ**: ಉದಯವಾಣಿ, ತುಷಾರ, ರೂಪತಾರ, ತರಂಗ ಇವು ಮಣಿಪಾಲದಿಂದ ಪ್ರಕಟವಾಗುತ್ತಿದ್ದು, ಅನೇಕ ಸ್ಥಳೀಯ ಪತ್ರಿಕೆಗಳು ಜನಪ್ರಿಯವಾಗಿವೆ.

**ಉಷ್ಣಾಂಶ:** ಕನಿಷ್ಠ ೨೫ ರಿಂದ ಗರಿಷ್ಠ ೩೪ ಡಿಗ್ರಿ ಸೆಲ್ಸಿಯಸ್.

**ಪುಷ್ಪ:** ಶಂಕರಪುರ ಮಲ್ಲಿಗೆ, ಹೆಮ್ಮಾಡಿ ಸೇವಂತಿ ಮತ್ತು ಗುಲಾಬಿ ಪ್ರಧಾನ ಪುಷ್ಪ ಕೃಷಿಯಾಗಿದೆ.

**ಕರಾವಳಿ ತೀರ ಪ್ರದೇಶ**

ಮರವಂತೆ, ಒತ್ತಿನೆಣೆ, ಕಾಪು, ಮಲ್ಪೆ, ಹಂಗಾರಕಟ್ಟೆ, ಪಡುಕೆರೆ, ಗಂಗೊಳ್ಳಿ, ಉಪ್ಪುಂದ, ಕೊಡೇರಿ, ಸೋಮೇಶ್ವರ, ಸಮುದ್ರ ಕಿನಾರೆಗಳಾಗಿವೆ.

**ಸಂಪರ್ಕ:**

ಖಾಸಗಿ ಬಸ್ಸುಗಳು ಒಡನಾಟವೇ ಹೆಚ್ಚಾಗಿದೆ, ಸರಕಾರಿ ಬಸ್ಸುಗಳ ಸಂಖ್ಯೆ ಕಡಿಮೆ ಇದೆ. ಸಂಪರ್ಕ ವ್ಯವಸ್ಥೆ ಅತ್ಯುತ್ತಮವಾಗಿವೆ.

**ಭಾಷೆ:**

ಕನ್ನಡ, ತುಳು, ಕೊಂಕಣಿ ಪ್ರಮುಖ ಭಾಷೆಗಳು, ಕುಂದಗನ್ನಡ, ಬ್ಯಾರಿ ಭಾಷೆ ಇನ್ನಿತರ ಉಪಭಾಷೆಗಳನ್ನು ಮಾತನಾಡುವವರ ಸಂಖ್ಯೆ ಸಾಕಷ್ಟಿದೆ. ಉರ್ದು, ಮಲಯಾಳಂ, ತಮಿಳು ಭಾಷಿಕರೂ ಇದ್ದಾರೆ.

**ಬಂದರು:**

ಮಲ್ಪೆ, ಹೆಜಮಾಡಿ, ಗಂಗೊಳ್ಳಿ, ಹಂಗಾರಕಟ್ಟೆ ಪ್ರಮುಖ ಕಿರು ಬಂದರುಗಳಾಗಿವೆ.

**ಬ್ಯಾಂಕಿಂಗ್:**

ಸಿಡಿಕೇಟ್ ಬ್ಯಾಂಕ್, ಕಾರ್ಪೊರೇಶನ್ ಬ್ಯಾಂಕ್‌ಗೆ ಉಡುಪಿ ತವರೂರು. ಪಿಗ್ಮಿ ಯೋಜನೆಯ ಜನಪ್ರಿಯತೆಯ ಕೊಡುಗೆ ಸಿಂಡಿಕೇಟ್ ಬ್ಯಾಂಕಿನದ್ದಾಗಿದೆ. ಸಹಕಾರಿ ಬ್ಯಾಂಕ್ (ಶಿಕ್ಷಕ, ವ್ಯವಸಾಯ, ಭೂ ಅಭಿವೃದ್ಧಿ) ಬ್ಯಾಂಕ್ ಪ್ರಸಿದ್ದವಾಗಿದೆ.

**ಪ್ರಸಿದ್ಧರು:**

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕೋಟ ಶಿವರಾಮ ಕಾರಂತ, ನಂದಳಿಕೆಯ ಲಕ್ಷ್ಮೀನಾರಾಯಣ (ಮುದ್ದಣ), ಶ್ರೀ ಕೃಷ್ಣ ಸೂಕ್ತಿಯ ಕಡೇಕಾರು ರಾಜಗೋಪಾಲರಾಯರು, ನವಯುಗದ ಹೊನ್ನಯ್ಯ ಶೆಟ್ಟಿ, ಸಾಂತ್ಯಾರು ವೆಂಕಟರಾಜರು, ಪಾವೆಂ ಖ್ಯಾತಿಯ ಪಾಡಿಗಾರು ವೆಂಕಟರಮಣ ಆಚಾರ್ಯ, ಯು.ಆರ್. ಅನಂತಮೂರ್ತಿ, ಮೊಗೇರಿ ಗೋಪಾಲಕೃಷ್ಣ ಅಡಿಗ, ವಿಜ್ಞಾನಿ ಯು.ಆರ್. ರಾವ್, ಡಾ. ತೋನ್ಸೆ ಮಾಧವ ಪೈ, ವೀರಪ್ಪ ಮೊಯಿಲಿ, ಶಂಕರನಾರಾಯಣ ಸಾಮಗ, ಪ್ರೇಮಾಭಟ್, ಎಂ.ಟಿ.ಆರ್. ಸದಾನಂದ ಮಯ್ಯ, ರಾಮದಾಸ ಸಾಮಗ, ಕಾಳಿಂಗ ನಾವಡ, ಹಾರಾಡಿ ರಾಮ ಗಾಣಿಗ, ಶಿಲ್ಪಿ ರೆಂಜಾಳ ಗೋಪಾಲ ಕೃಷ್ಣ ಶೆಣೈ, ಜಸ್ಟೀಸ್ ಕೆ.ಎಸ್. ಹೆಗ್ಡೆ, ಲೋಕಾಯುಕ್ತ ಸಂತೋಷ್ ಹೆಗ್ಡೆ, ಸಂತೊಷ ಕುಮಾರ್ ಗುಲ್ವಾಡಿ, ಪತ್ರಿಕಾ ರಂಗದ ಭೀಷ್ಮ ಮಾಧವ ವಿಠಲ್ ಕಾಮತ್, ಚಿತ್ರ ಕಲಾವಿದ ಕೆ.ಕೆ.ಹೆಬ್ಬಾರ್, ಸಹಕಾರಿ ದುರೀಣ ಮೊಳಹಳ್ಳಿ ಶಿವರಾಮ.

ಪ್ರಕಾಶ ಮತ್ತು ದೀಪಿಕಾ ಪಡುಕೋಣೆ, ಡಾ. ನಾ.ಮೊಗಸಾಲೆ, ಬನ್ನಂಜೆ ಗೋವಿಂದ ಆಚಾರ್ಯ, ಪ್ರೊ. ಮುರಾರಿ ಬಲ್ಲಾಳ್, ವೈದೇಹಿ, ದುಂಡಿರಾಜ್, ವ್ಯಾಸರಾಯ ಬಲ್ಲಾಳ್, ಅಂಬಾತನಯ ಮುದ್ರಾಡಿ, ಸೂರ್ಯನಾರಾಯಣ ಚಡಗ, ಉಪ್ಪುಂದ ಚಂದ್ರಶೇಖರ ಹೊಳ್ಳ, ಚಿತ್ರ ನಟರಾದ ಉಪೇಂದ್ರ, ಸುನಿಲ್, ವಿನಯಾಪ್ರಸಾದ್, ಸದಾಶಿವ ಬ್ರಹ್ಮಾವರ್, ಎಂ.ಎಸ್. ಕಾರಂತ, ಪಿ.ಕಾಳಿಂಗರಾವ್, ನಿರ್ದೇಶಕರಾದ ಶ್ಯಾಮ್ ಬೆನೇಗಲ್, ಮಹೇಶ್ ಭಟ್, ಸಮತ ಭದ್ರಗಿರಿ ಅಚ್ಯುತದಾಸರು ಮತ್ತು ಕೇಶವದಾಸರು, ಗೋಂಬೆಯಾಟದ ಕೊಗ್ಗ ಕಾಮತ್, ಜಾದುಗಾರ ಶಂಕರ್ ಹಾಗೂ ಇತರ ಅನೇಕರನ್ನು ಕಾಣಬಹುದಾಗಿದೆ.

**ಜಿಲ್ಲೆಯ ಕಲೆ ಮತ್ತು ಸಂಸ್ಕೃತಿ**

ಯಕ್ಷಗಾನ, ತಾಳ ಮದ್ದಲೆ, ಹೂವಿನ ಕೋಲು,ನಾಗಮಂಗಲ, ಢಕ್ಕೆ ಬಲಿ, ಭೂತಕೋಲ, ಸಿರಿ ಜಾತ್ರೆ, ಕಂಬಳ, ಕೋಳಿ ಅಂಕ, ಗೊಂಬೆಯಾಟ, ಪಾಡ್ದನ, ತೆಂಬರೆ ನಲಿಕೆ, ಕುಡುಬಿಯವರ ಹೋಳಿ ಕುಣಿತ, ಸುಗ್ಗಿ ಕುಣಿತ, ಕೋಲಾಟ, ಕೆಥೋಲಿಕ್ ಮಾಂಡ್ ಸೊಬಾನ್, ಕೊಂಕಣಿ ಖಾರ್ವಿ ಮೇಳ, ಮುಸ್ಲಿಮರ – ವೈವಿಧ್ಯಮಯವಾದ ಜನಪದ ಕಲೆಗಳು ಇಲ್ಲಿವೆ, ಕನ್ನಡದ ಖ್ಯಾತ ವಿದ್ವಾಂಸ ಪ್ರೋ. ಮರಿಯಪ್ಪ ಭಟ್ಟ ಹೇಳಿದಂತೆ ಉಡಪಿ ಜಿಲ್ಲೆ ಜನಪದ ಕಲೆಗಳ ಮ್ಯೂಸಿಯಂ ಎಂದರೂ ತಪ್ಪಾಗಲಾರದು.

ಗೊಡ್ಡೆ ಜನಾಂಗದವರ ಕಂಗಿಲು, ಕಾರ್ಕಳದ ಮಾಂಕಾಳಿ ಕುಣಿತ, ಕಡಲ ಜನರ ಹೌದೇರಾಯರ ಓಲಗ, ಕುಂದಾಪುರದ ಸಾವಿರ ಹಣ್ಣಿನ ವಸಂತ, ಪಾಣರಾಟ, ಮಾಯಿದ ಪುರುಷೆ, ಚುಣ್ಣ ವೈದ್ಯರ ಢಕ್ಕೆ ಬಲಿ, ಆಶ್ಲೇಷ ಬಲಿ, ಕಾಡ್ಯ ನಾಟ, ಕಾಪುವಿನ ಪಿಲಿಕೋರಿ, ಮರಾಠಿ ಜನರ ಗೋದೋಳು ಪೂಜೆ, ಬಂಟ ಜನಾಂಗದ ಕುಲೆ ನಲಿಕೆ, ಹುಲಿವೇಷ, ಅಜ್ಜಿ ಓಡಿಸುವುದು, ಕದಿರ ಹಬ್ಬ, ಬಲೀಂದ್ರ ಪೂಜೆ ಮುಂತಾದುವುಗಳು ಉಡುಪಿ ಜಿಲ್ಲೆಯ ಕಲೆ ಮತ್ತು ಸಂಸ್ಕೃತಿಯನ್ನು ಶ್ರೀಮಂತವಾಗಿರಿಸಿದೆ.

ನಾಡು, ನುಡಿ ಸಂಸ್ಕೃತಿಗೆ ಸಂಬಂಧಿಸಿದಂತೆ ಈ ನೆಲದ ಪ್ರತಿಯೊಂದು ಊರು, ಕಲ್ಲುಗಳು ತಮ್ಮದೇ ಆದಂತಹ ಕಥೆಗಳನ್ನು ಹೇಳುತ್ತವೆ. ಇವುಗಳ ಪರಿಚಯ ನಮ್ಮ ಮಕ್ಕಳಿಗೆ ಆಗಬೇಕಾಗಿರುವುದು ಅವಶ್ಯಕ. ಈ ಕೈಪಿಡಿಯಲ್ಲಿ ಕೆಲವೊಂದು ಪ್ರೇಕ್ಷಣೀಯ ಸ್ಥಳಗಳು ಪರಿಚಯ ಮಾಡಿಕೊಡಲಾಗಿದೆ. ಇದರ ಸದುಪಯೋಗವನ್ನು ಶಿಕ್ಷಕರು, ಮಕ್ಕಳು ಪಡೆಯುವಂತಾಗಬೇಕು. ನನ್ನ ಜನ, ನನ್ನ ಊರು ಮತ್ತು ತನ್ನ ಸುತ್ತ ಮುತ್ತಲಿನ ಸ್ಥಳಗಳನ್ನೂ ಸಂದರ್ಶಿಸುತ್ತಾ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಜ್ಞಾನವನ್ನೂ ಪಡೆಯುವಂತಾಗಲಿ. ಮಕ್ಕಳ ಸಹಜ ಕುತೂಹಲ ಆಸಕ್ತಿನ್ನು ಹೆಚ್ಚಿಸುವುದರ ಮೂಲಕ ಗುಣಮಟ್ಟದ ಕಲಿಕೆಗೆ ಒತ್ತುಕೊಡುವುದೇ ಜಿಲ್ಲಾ ಪ್ರವಾಸದ ಆಶಯವಾಗಿದೆ.

# ಉಡುಪಿ ಜಿಲ್ಲೆಯ ಪ್ರವಾಸಿ ತಾಣಗಳು

**ಜನತಾ ಮೀನು ಸಂಸ್ಕರಣ ಘಟಕ:**

ಮಾರ್ಗ:  ಕೋಟ – ಪಡುಕೆರೆ

ದೂರ: ೨ ಕಿ.ಮೀ.

**(೦೮೨೦-೨೫೬೪೪೫೧)**




ಅತ್ಯಂತ ದೊಡ್ಡ ಸಾಗರೋತ್ಪನ್ನ ರಫ್ತು ಕೈಗಾರಿಕೆಯಾಗಿದೆ. ಇಲ್ಲಿ ಮೀನಿನಿಂದ ಮೀನೆಣ್ಣೆ, ಮೀನಿನ ಆಹಾರಗಳನ್ನು ತಯಾರಿಸಿ ದೇಶ-ವಿದೇಶಗಳಿಗೆ ಕಳುಹಿಸಲಾಗುತ್ತದೆ. ಅತ್ಯಾಧುನಿಕ ತಮತ್ರಜ್ಞಾನವಿದೆ. ಅತ್ಯಾಧುನಿಕ ಮಾದರಿಗಳಿವೆ. ಸ್ಥಳೀಯ ಸಂಪನ್ಮೂಲ ಮತ್ತು ಕೈಗಾರಿಕೆ ಇದರ ಮೂಲೋದ್ಧೇಶವಾಗಿದೆ.

**ಮಂಜುಗಡ್ಡೆ ಸ್ಥಾವರ:**



ಸಮೀಪದ ಪಡುಕೆರೆಯಲ್ಲಿ ಮಂಜುಗಡ್ಡೆ ಸ್ಥಾವರವಿದೆ. ಮಂಜುಗಡ್ಡೆ ತಯಾರಿ ಹಾಗೂ ಶೀತಲೀಕರಣ ಘಟಕಗಳನ್ನು ನೋಡಬಹುದು.

**ಸಾಲಿಗ್ರಾಮ – ಕಾರಂತ ಸ್ಮಾರಕ**

ಮಾರ್ಗ: ಬ್ರಹ್ಮಾವರ – ಸಾಲಿಗ್ರಾಮ
ದೂರ: ೨೧ ಕಿ.ಮೀ.



ಕಾರಂತ ಕೇಂದ್ರ: ಇಲ್ಲಿ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ನಡೆದಾಡುವ ವಿಶ್ವಕೋಶ ಖ್ಯಾತಿಯ ಕಡಲತಡಿಯ ಭಾರ್ಗವ ದಿ.ಶಿವರಾಮ ಕಾರಂತ ಸ್ಮಾರಕ "ಮಾನಸ", ವಸ್ತು ಸಂಗ್ರಹಾಲಯ, ಸ್ಮೃತಿ ಚಿತ್ರಶಾಲೆ, ಕಾರಂತ ರಂಗರಥ, ಯಕ್ಷಗಾನ ಕೇಂದ್ರಗಳಿವೆ.

**ಡಿವೈನ್ ಪಾರ್ಕ:**



ಸ್ವಾಮಿ ವಿವೇಕಾನಂದರ ಶ್ರದ್ಧಾ ಕೇಂದ್ರ. ಇಲ್ಲಿ ಯೋಗ, ಏಕಾಗ್ರತೆ, ವಿವೇಕಾನಂದರ ತತ್ತ್ವಗಳ ಅನುಷ್ಠಾನಕ್ಕೆ ಪ್ರಯತ್ನಿಸಲಾಗುತ್ತದೆ. ಇಲ್ಲಿಂದ ವಿವೇಕ ಸಂಪದ ಎಂಬ ಪತ್ರಿಕೆ ಪ್ರಕಟಗೊಳ್ಳುತ್ತಿದೆ.

**ಶ್ರೀ ಗುರುನರಸಿಂಹ ದೇವಸ್ಥಾನ:**



ದೇವಾಲಯದಲ್ಲಿ ನರಸಿಂಹ ಹಾಗೂ ಅಂಜನೇಯ ದೇವಸ್ಥಾನವಿದೆ. ೧೯೧೦ ರಲ್ಲಿ ಸ್ಥಾಪನೆಗೊಂಡು ೮ನೇ ಶತಮಾನದ ಕದಂಬ ವಂಶದ ಮುಯೂರವರ್ಮನ ಮೊಮ್ಮಗ ಲೋಕಾದಿತ್ಯ ರಾಜನ ಕಾಲವಾಗಿರುವ ಇತಿಹಾಸ ಇದೆ.

ದೇವರ ವಿಗ್ರಹವು ಸಂಪೂರ್ಣವಾಗಿ ಸಾಲಿಗ್ರಾಮ ಶಿಲಾಮಯವಾಗಿರುವುದರಿಂದ ಸಾಲಿಗ್ರಾಮ ಹೆಸರು ಬಂದಿರುವ ಹಿನ್ನೆಲೆ ಇದೆ. ವಿಗ್ರಹದ ಒಂದು ಕಡೆ ಆನೆ ಮತ್ತು ಇನ್ನೊಂದು ಕಡೆ ಸಿಂಹದ ಮುಖ ಇದೆ. ನರಸಿಂಹ ಉಗ್ರತೆಯನ್ನು ತಡೆದು ಊರಿನ ರಕ್ಷಣೆಗಾಗಿದ ಇದರ ಎದುರಿನಲ್ಲಿ ಶ್ರೀ ಅಂಜನೇಯನ ದೇವಾಲಯವಿದೆ. ಇದು ಶಿಲಾಮಯವಾಗಿದೆ.

**ಹಂಗಾರ ಕಟ್ಟೆ – ಶ್ರೀ ಮಠ ಬಾಳ್ಕುದ್ರು**

ಮಾರ್ಗ:  ಬ್ರಹ್ಮಾವರ – ಮಾಬುಕಳ – ಹಂಗಾರಕಟ್ಟೆ
ದೂರ: ೩ ಕಿ.ಮೀ.



**ಶ್ರೀ ಮಠ ಬಳ್ಕುದ್ರು:** ೧೨೦೦ ವರ್ಷಗಳ ಇತಿಹಾಸದ ಶ್ರೀ ಶಂಕರಾಚಾರ್ಯರ ಪಾದ ಸ್ಪರ್ಶವಾದ ಮಠ. ಶ್ರೀ ನರಸಿಂಹ ಸ್ವಾಮಿಗಳು ಮಠಾದೀಶರಾಗಿದ್ದು ವೇದ ಪಾಠಶಾಲೆ ಮತ್ತು ನಿರಂತರ ಅನ್ನದಾನ ನಡೆಯುತ್ತದೆ.

**ಟೆಬ್ಮಾ ಹಡಗು ಉದ್ಯಮ (೦೮೨೦-೨೫೭೧೯೨೨)**

ಮಾರ್ಗ:  ಉಡುಪಿ – ಮಣಿಪಾಲ
ದೂರ : ೬ ಕಿ.ಮೀ.



**ಟೆಬ್ಮಾ:** ವಿಶ್ವವಿಖ್ಯಾತ ಹಡಗು ನಿರ್ಮಾಣ ತಂತ್ರಜ್ಞಾನವನ್ನು ಹೊಂದಿದೆ. ಇದರೊಂದಿಗೆ ನೆದರ್ ಲ್ಯಾಂಡ್ ಮೂಲದ ಬಹುರಾಷ್ಟ್ರೀಯ ಕಂಪೆನಿಯು ವಿದೇಶಿ ಬಂಡವಾಳ ಹೂಡಿಕೆಯಿಂದ ಹಡಗು ನಿರ್ಮಾಣಕ್ಕೆ ಬೇಕಾಗುವ ಪರಿಕರಗಳನ್ನು ಒದಗಿಸುವ ಸಿ.ಎಸ್. ಇಂಡಸ್ಟ್ರೀಯಲ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯು ಇರುತ್ತದೆ. ಇದು ಹಂಗಾರಕಟ್ಟೆಯಲ್ಲಿದೆ.

**ಮಣಿಪಾಲ:**

**ತಾರಾ ವೀಕ್ಷಣಾಲಯ**



ಸೌರವ್ಯೂಹದ ಬಗ್ಗೆ ಪರಿಪಕ್ವ ಮಾಹಿತಿಯನ್ನು ತಾರಾ ವೀಕ್ಷಣಾಲಯದಲ್ಲಿ ಪಡೆಯಬಹುದು.

**ಅನಾಟಮಿ ಮ್ಯೂಸಿಯಂ**



ಮಾನವ ದೇಹದ ಅಂಗಾಂಗ ಶಾಸ್ತ್ರದ ಬಗ್ಗೆ ಅಧಿಕೃತವಾದ ಸಚಿತ್ರ ಮಾಹಿತಿ ಅನಾಟಮಿ ಮ್ಯೂಸಿಯಂ ನಲ್ಲಿ ಸಿಗುತ್ತದೆ.

***ಹಾಲು ಡೈರಿ :***



ಹಾಲಿನ ಸಂಸ್ಕರಣಾ ಘಟಕವಾದ ಇದು ಮಕ್ಕಳೆಲ್ಲರೂ ನೋಡಲೇಬೇಕಾದ ಶೈಕ್ಷಣಿಕ ಸ್ಥಳವಾಗಿದೆ. ಹಾಲಿನ ಬೇರೆ ಬೇರೆ ಉತ್ಪನ್ನಗಳನ್ನು ತಯಾರಿಸುವ ಘಟಕಗಳನ್ನು ನೋಡುವುದು ಮನೋಲ್ಲಾಸ ನೀಡುವ ವಿಷಯ ವಾಗಿದೆ.

**ಮಣಿಪಾಲ ಪ್ರಿಂಟಿಂಗ್ ಪ್ರೆಸ್ :**



ಇಲ್ಲಿ ಉದಯವಾಣಿ, ತುಷಾರ, ತುಂತುರು, ತರಂಗ, ರೂಪತಾರ ಇತ್ಯಾದಿ ದಿನಪತ್ರಿಕೆ ಹಾಗೂ ಮಾಸ ಪತ್ರಿಕೆಗಳನ್ನು ಪ್ರಕಟಿಸಲಾಗುತ್ತದೆ.

**ಹೆರಿಟಿಜ್ ವಿಲೇಜ್ :**




ಮಣಿಪಾಲ ನಗರದಿಂದ ೦.೫ ಕಿ.ಮೀ. ದಕ್ಷಿಣಕ್ಕೆ ನಡೆದರೆ ಈ ಹೆರಿಟೆಜ್ ವಿಲೇಜ್ ಸಿಗುತ್ತದೆ. ಇಲ್ಲಿ ಹಿಂದಿನಕಾಲದ ಪರಂಪರಾಗತವಾದ ಕಟ್ಟಿದ ೧೭ ಮನೆಗಳು ಮರದ ಕಲಾ ಕೃತಿಗಳಿಂದ ಕೂಡಿದ್ದು ಮನಸ್ಸಿಗೆ ಮುದ ನೀಡುತ್ತವೆ.

**ಜಲಗುಂಡಿ**



ಇಂದ್ರಾಳಿ ಗುಳ್ಮೆಯಿಂದ ಪೂರ್ವಕ್ಕೆ ಚಾರಣ ಮಾಡಿದರೆ ಸುಮಾರು ೧೩ ಸಣ್ಣ ಸಣ್ಣ ಜಲಪಾತಗಳು ಕಣ್ಮನ ಸೆಳೆಯುತ್ತವೆ.

ಮಾರ್ಗ: ಉಡುಪಿ – ಮಣಿಪಾಲ – ಲಕ್ಷ್ಮೀಂದ್ರನಗರ ಬಸ್ ನಿಲ್ದಾಣದಿಂದ ದಕ್ಷಿಣಕ್ಕೆ ೨ ಕಿ.ಮೀ. ಪಯಣ.

**ಕುಂಭಾಶಿ ಆನೆಗಡ್ಡೆ ವಿನಾಯಕ**

ಮಾರ್ಗ:  ಕುಂದಾಪುರ-ಕೋಟೇಶ್ವರ-ಕುಂಭಾಶಿ
ದೂರ : ೬ ಕಿ.ಮೀ.



ಗಣಪತಿ ದೇವಾಲಯ ಹಾಗೂ ಹರಿಹರ ದೇವಾಲಯಗಳು. ಕುಂಭಾಸುರ ಎಂಬ ಅಸುರನಿಂದ ಕುಂಭಾಶಿಯಾಗಿತ್ತೆಂದು ಹಾಗೂ ಪಾಂಡವರು ವನವಾಸದ ವೇಳೆ ಇತ್ತ ಆಗಮಿಸಿದರೆಂದು ಹೇಳಲಾಗುತ್ತಿದೆ.

# ಉಡುಪಿ ತಾಲ್ಲೂಕು ಪ್ರವಾಸಿ ತಾಣಗಳು

ಕುಂಭಾಶಿ ಹರಿಹರ, ಕುಂಭಾಶಿ ನಾಗಾಚಲ ಅಯ್ಯಪ್ಪ ಸ್ವಾಮಿ, ಕುಂದಾಪುರ – ಕುಂದೇಶ್ವರ ತೀರ್ಥ ಸರೋವರ, ಅಚಲ ಭವನ, ಕೋಟೇಶ್ವರ, ಕೈಗಾರಿಕಾ ವಲಯ, ನೈಟಿಂಗೇಲ್ ನರ್ಸಿಂಗ್ ಕಾಲೇಜು, ಹಂಗಳೂರು, ಬೀಜಾಡಿ – ಕೊಳ, ಹಲ್ಸನಾಡು ಮನೆ, ಗಂಗೊಳ್ಳಿ – ಬಂದರು, ಹೊಸಂಗಡಿ, ಸಂಡೂರು ಜಲವಿದ್ಯುತ್, ತೆಕ್ಕಟ್ಟೆ

**ಕುಂಭಾಶಿ ಹರಿಹರ**



ಹರಿ – ಹರ ದೇವಸ್ಥಾನವಿದ್ದು, ತೀರ್ಥ ಸರೋವರದ ಮಧ್ಯದಲ್ಲಿದೆ. ಇದು ಬೇಸಿಗೆಯಲ್ಲಿಯೂ ನೀರು ತುಂಬಿರವುದನ್ನು ಕಾಣಬಹುದು. ಹರಿಹರ ದೇವಾಲಯದ ದಕ್ಷಿಣ ಭಾಗದಲ್ಲಿ ಸೂರ್ಯ ನಾರಾಯಣ ದೇವಾಲಯವಿದೆ.

**ಕುಂಭಾಶಿ ನಾಗಾಚಲ ಅಯ್ಯಪ್ಪ ಸ್ವಾಮಿ**



ಇದು ಎತ್ತರದಲ್ಲಿದ್ದು. ಅಯ್ಯಪ್ಪ ಸ್ವಾಮಿ ದೇವರು ಹಾಗೂ ಪಕ್ಕದಲ್ಲಿ ನವಗ್ರಹ ವಿಗ್ರಹಗಳಿವೆ.

**ಕುಂದಾಪುರ – ಕುಂದೇಶ್ವರ ತೀರ್ಥ ಸರೋವರ**

ಮಾರ್ಗ:  ಕುಂದಾಪುರ
ದೂರ: ೦.೧ ಕಿ.ಮೀ.



ಕುಂದಾಪುರದ ಹೃದಯ ಭಾಗದಲ್ಲಿ ಕುಂದೇಶ್ವರ ದೇವಾಲಯವಿದ್ದು ಆಕರ್ಷಣೀಯ ಕೆರೆಯನ್ನು ಹೊಂದಿದೆ ಶಿವನ ವಿಗ್ರಹ ಹಾಗೂ ನಂದಿ ವಿಗ್ರಹವು ಇದೆ. ಕುಂದರಸನಿಂದಾಗಿ ಕುಂದಾಪುರ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ.

**ಅಚಲ ಭವನ**

ಮಾರ್ಗ:  ಕುಂದಾಪುರ
ದೂರ: ೦.೪ ಕಿ.ಮೀ.



ಇಲ್ಲಿ ಉದ್ಯಾನವಿದೆ. ಪಕ್ಕದಲ್ಲಿ ಓಂ ಶ್ರೀ ಹಾಗೂ ಪ್ರಭಾಕರ ಟೈಲ್ಸ್ ಹೆಂಚಿನ ಕಾರ್ಖಾನೆಗಳಿವೆ. ಇಲ್ಲಿಂದ ದಕ್ಷಣ-ಉತ್ತರ-ಪೂರ್ವಾಭಿಮುಖವಾಗಿ ಕಿನಾರೆ ಭಾಗದಲ್ಲಿ ರಿಂಗ್‌ರೋಡ್ ಪುರಸಭೆ ವತಿಯಿಂದ ನಿರ್ಮಾಣಗೊಂಡಿದೆ.

**ಕೋಟೇಶ್ವರ**

ಮಾರ್ಗ : ಕುಂದಾಪುರ-ಕೋಟೇಶ್ವರ
ದೂರ: ೪ ಕಿ.ಮೀ.





ಕೋಟೇಶ್ವರ ರಥ ಹಾಗೂ ಕೋಟೇಶ್ವರ ಕರೆಯ ಸುಂದರ ದೃಶ್ಯಾವಳಿ. ಇದು ಹೊಯ್ಸಳ ಮಾದರಿಯಲ್ಲಿ ನಿರ್ಮಿತವಾದ ಕಲ್ಲಿನ ದೇವಾಲಯ. ವರ್ಷಂಪ್ರತಿ ಕೊಡಿ ಹಬ್ಬ ಎಂಬ ರಥೋತ್ಸವ ಜಾತ್ರೆ ನಡೆಯುತ್ತದೆ.

**ಕೈಗಾರಿಕಾ ವಲಯ**

ಮಾರ್ಗ : ಕೋಟೇಶ್ವರ-ಕಟ್ಗೇರಿ
ದೂರ: ೧ ಕಿ.ಮೀ.



**ನೈಟಿಂಗೇಲ್ ನರ್ಸಿಂಗ್ ಕಾಲೇಜು**

ಮಾರ್ಗ : ಕೋಟೇಶ್ವರ-ಕಟ್ಗೇರಿ
ದೂರ: ೧ ಕಿ.ಮೀ.




ಇಲ್ಲಿ ವಿವಿಧ ನರ್ಸಿಂಗ್ ಕೋರ್ಸ್ ಇರುವ ಕಾಲೇಜು ಇದ್ದು. ಉತ್ತಮ ಶಿಕ್ಷಣ ನೀಡಲಾಗುತ್ತದೆ.

**ಹಂಗಳೂರು**

ಮಾರ್ಗ : ಕುಂದಾಪುರ-ಹಂಗಳೂರು
ದೂರ: ೨ ಕಿ.ಮೀ.

ಇಲ್ಲಿ ಬೃಹದಾಕಾರದ ಆಂಜನೇಯ ವಿಗ್ರಹವನ್ನು ವೀಕ್ಷಿಸಬಹುದಾಗಿದೆ. ಇದು ಕರ್ನಾಟಕ ಬ್ಯಾಂಕಿನ ಪಶ್ಚಿಮ ಭಾಗದಲ್ಲಿದೆ.

**ಬೀಜಾಡಿ – ಕೊಳ**


ಮಾರ್ಗ : ಕೋಟೇಶ್ವರ-ಬೀಜಾಡಿ
ದೂರ: ೭ ಕಿ.ಮೀ.



ಬಹು ವಿಸ್ತಾರವಾದ ಕೊಳವಾಗಿದ್ದು ನೀರಿನ ಮೇಲ್ಭಾಗದಲ್ಲಿ ಅಂತರಗಂಗೆ ತೇಲುತ್ತಿರುವುದನ್ನು ಕಾಣಬಹುದು. ವೈಜ್ಞಾನಿಕವಾಗಿ ಜಲಸಸ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು.

**ಹಲ್ಸನಾಡು ಮನೆ**

ಮಾರ್ಗ : ಕುಂದಾಪುರ-ಮುಲ್ಲಿಕಟ್ಟೆ-ನೂಜಾಡಿ
ದೂರ: ೧೨ ಕಿ.ಮೀ.



ಕುಂದಾಪುರದಿಂದ ರಾಷ್ಟ್ರೀಯ ಹೆದ್ದಾರಿ ತಲ್ಲೂರಿನ ಬಳಿ ಬಲಕ್ಕೆ ೧೨ ಕಿ.ಮೀ. ದೂರದಲ್ಲಿ ಹಲ್ಸನಾಡು ಕುಟುಂಬದ ಪುರಾತನ ಮನೆಯೂ ಆಕರ್ಷಕ ಕೆತ್ತನೆಗಳಿಂದ ಕೂಡಿದ್ದು. ಅನೇಕ ಚಲನಚಿತ್ರಗಳು ಇಲ್ಲಿ ಚಿತ್ರೀಕರಣಗೊಂಡಿದ್ದು. ಪ್ರವಾಸಿಗರ ಆಕಷರ್ಣೀಯ ಕೇಂದ್ರವಾಗಿದೆ.

**ಗಂಗೊಳ್ಳಿ – ಬಂದರು**

ಮಾರ್ಗ : ಕುಂದಾಪುರ-ತ್ರಾಸಿ-ಗಂಗೊಳ್ಳಿ
ದೂರ: ೧೭ ಕಿ.ಮೀ.



ಗಂಗೊಳ್ಳಿ ಬಂದರ್ ವ್ಯಾಪಾರ ಕೇಂದ್ರವಾಗಿದೆ. ಇಲ್ಲೆ ಹತ್ತಿರದಲ್ಲಿ ವ್ಯಕ್ತಿಯೊಬ್ಬರ ಖಾಸಗಿ ಪುರಾತನ ವಸ್ತು ಸಂಗ್ರಹಾಲಯವಿದೆ. ಇಲ್ಲಿ ಬ್ರಿಟಿಷ್ ಕಾಲದ ಆಯುಧಗಳು, ಸುಗಂಧ ದ್ರವ್ಯಗಳನ್ನು ನೊಡಬಹುದಾಗಿದೆ. ಮೀನುಗಾರಿಕೆಗೆ ಇದು ಹೆಸರು ವಾಸಿಯಾಗಿದೆ. ಹಿಂದೆ ಇಲ್ಲಿಗೆ ಪೋರ್ಚುಗೀಸರ ಆಗಮನವಾಗಿತ್ತೆಂದು ಹೇಳಲಾಗುತ್ತಿದೆ.

**ಹೊಸಂಗಡಿ**

**ವಾರಾಹಿ ಜಲ ವಿದ್ಯುತ್**

ಮಾರ್ಗ : ಕುಂದಾಪುರ-ತ್ರಾಸಿ-ಗಂಗೊಳ್ಳಿ
ದೂರ: ೧೭ ಕಿ.ಮೀ.



ಇಲ್ಲಿ ವಾರಾಹಿ ನದಿಯ ನೀರನ್ನು ಬಳಸಿ ಜಲ ವಿದ್ಯುತ್ ಅನ್ನು ಉತ್ಪಾದಿಸಲಾಗುತ್ತದೆ. ವೀಕ್ಷಣೆಗಾಗಿ ಅನುಮತಿ ಪತ್ರ ಮುಂಗಡವಾಗಿ ಪಡೆಯಬೇಕು.

**ಸಂಡೂರು ಜಲವಿದ್ಯುತ್**

ಮಾರ್ಗ : ಕುಂದಾಪುರ-ಹೊಸಂಗಡಿ
ದೂರ: ೨೭ ಕಿ.ಮೀ.



ವಾರಾಹಿ ನದಿಯ ಜಲ ವಿದ್ಯುತ್ ಯೋಜನೆಯ ಹೊರಹರಿವಿನ ನೀರನ್ನು ಬಳಸಿ ಸಣ್ಣ ಪ್ರಮಾಣದ ಜಲವಿದ್ಯುತ್ ಅನ್ನು ತಯಾರಿಸುವ ಘಟಕವಾಗಿದೆ.

**ತೆಕ್ಕಟ್ಟೆ**

ಮಾರ್ಗ : ಕುಂದಾಪುರ-ತೆಕ್ಕಟ್ಟೆ
ದೂರ: ೯ ಕಿ.ಮೀ.



ಕುವೆಂಪು ಸರಕಾರಿ ಮಾದರಿ ಪ್ರಾಥಮಿಕ ಶಾಲೆ


ರಾಷ್ಟ್ರಕವಿ ಕುವೆಂಪು ಶತಮಾನೋತ್ಸವ ಸ್ಮಾರಕ ಶಾಲೆ, ಇಲ್ಲಿ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಇಲ್ಲಿ ೪೦೦ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು. ಸಿರಾಮಿಕ್ ಗ್ರೀನ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ. ಸುಸಜ್ಜಿತ ಕೊಠಡಿ, ಶೌಚಾಲಯ, ಸಭಾಭವನ, ರಂಗಮಂದಿರವಿದ್ದು, ಡ್ರಾಯಿಂಗ್, ವೃತ್ತಿ, ಹೊಲಿಗೆ, ಸಂಗೀತ, ಗ್ರಂಥಾಲಯ, ಕಂಪ್ಯೂಟರ್, ಯೋಗ, ಯಕ್ಷಗಾನ ಮುಂತಾದ ಪಠ್ಯೇತರ ಚಟುವಟಿಕೆಗಳಿವೆ. ಇದು ರಾಜ್ಯದಲ್ಲೇ ಉತ್ತಮ ಶಾಲೆಯೆಂಬ ಹೆಸರು ಪಡೆದಿದೆ.

# ಉಡುಪಿ ತಾಲ್ಲೂಕು ಪ್ರವಾಸಿ ತಾಣಗಳು

ಬಾರ್ಕೂರು, ಬ್ರಹ್ಮಾವರ-ಕೃಷಿ ಕೇಂದ್ರ, ಆಕಾಶವಾಣಿ ಬ್ರಹ್ಮಾವರ, ಮಂದಾರ್ತಿ: ದುರ್ಗಾಪರಮೇಶ್ವರಿ ಅಮ್ಮನವರು, ಕೊಕ್ಕರ್ಣೆ – ಸೂರಾಲು ಅರಮನೆ, ಮೆಕ್ಕೆ ಕಟ್ಟು – ನಂದಿಕೇಶ್ವರ, ಪಡುಮುಂಡು-ಕಲ್ಲು ಗಣಪತಿ ದೇವಸ್ಥಾನ, ನೀಲಾವರ-ಮಹಿಷಮರ್ಧಿನೀ ದೇವಾಲಯ, ಕೋಟ – ಹಿರೇಮಹಾಲಿಂಗೇಶ್ವರ, ಕೋಟಾ ಅಮೃತೇಶ್ವರಿ

**ಬಾರ್ಕೂರು**

ಮಾರ್ಗ: ಬ್ರಹ್ಮಾವರ-ಬಾರ್ಕೂರು
ದೂರ: ೪ ಕಿ.ಮೀ.



ವೀಕ್ಷಣಾ ಸ್ಥಳಗಳು. ಮೂಡುಕೇರಿ ಸೋಮೇಶ್ವರ ದೇವಸ್ಥಾನ ಶ್ರೀ ಪಂಚಲಿಂಗೇಶ್ವರ ಕಲ್ಲಿನ ಚಪ್ಪರ ಕತ್ತಲೆ ಬಸದಿ ಗಣಪತಿ ದೇವಸ್ಥಾನ

**ಐತಿಹಾಸಿಕ ಬಾರ್ಕೂರು:** ಆಳುಪರು, ಹೊಯ್ಸಳರು, ವಿಜಯನಗರ, ಕೆಳದಿ ಹಾಗೂ ಬೂತಾಳ ಪಾಂಡ್ಯನ ಇತಿಹಾಸ ಹೊಂದಿದೆ. ಹಂಪೆಯ ಹಿಂದಿನ ಅವಶೇಷದಂತೆ ಭಂಗವಾದ ರೀತಿಯಲ್ಲಿ ಕಂಡುಬರುವುದು. ಹಿಂದೆ ಇಲ್ಲಿ ೩೬೫ಕ್ಕೂ ಮಿಕ್ಕಿ ದೇವಸ್ಥಾನಗಳಿದ್ದು, ದಿನಕ್ಕೊಂದರಂತೆ ಅರಸರು ದೇವಸ್ಥಾನದ ಪೂಜೆ ಸಲ್ಲಿಸುತ್ತಿದ್ದರೆಂಬ ಪ್ರತೀತಿ ಇದೆ. ಇಲ್ಲಿ ಹತ್ತು ಕೇರಿಗಳಿದ್ದು. ಒಂದೊಂದು ಕುಲಕಸುಬುದಾರರಿಗೆ ಒಂದೊಂದು ಕೇರಿ ಇದ್ದಿತ್ತೆಂಬ ದಂತ ಕಥೆ ಇದೆ.

**ಬ್ರಹ್ಮಾವರ-ಕೃಷಿ ಕೇಂದ್ರ**

ಮಾರ್ಗ: ಬ್ರಹ್ಮಾವರ
ದೂರ: ೧ ಕಿ.ಮೀ.



ಹೆಬ್ಬಾಳದ ಕೃಷಿ ವಿಶ್ವವಿದ್ಯಾಲಯದ ಶಾಖೆಯಾಗಿರುವ ಇದು ೧೯೮೨ರಲ್ಲಿ ಸ್ಥಾಪಿತವಾಗಿದ್ದು ಶೈಕ್ಷಣಿಕ ಮಹತ್ವ ಪಡೆದ ಸ್ಥಳವಾಗಿದೆ. ಮೊಲಸಾಕಾಣೆ, ಕೋಳಿಸಾಕಣೆ, ಮಣ್ಣು, ನೀರು ಮತ್ತು ಸಸ್ಯ ವಿಶ್ಲೇಷಣೆ ಪ್ರಯೋಗಾಲಯ, ಹೈಬ್ರಿಡ್ ಗಿಡಗಳು. ಹೀಗೆ ಹತ್ತು ಹಲವು ಅಂಶಗಳನ್ನು ಹೊಂದಿದ ೩೪೦ ಎಕ್ರೆಗಳನ್ನು ವಿಶಾಲವಾದ ಜಾಗದಲ್ಲಿ ಇದು ಹಬ್ಬಿದೆ.

**ಆಕಾಶವಾಣಿ ಬ್ರಹ್ಮಾವರ**

ಮಾರ್ಗ: ಬ್ರಹ್ಮಾವರ
ದೂರ: ೧ ಕಿ.ಮೀ.



ಬ್ರಹ್ಮಾವರ ಕೆಮಿಕಲ್ಸ್ ಹಾಗೂ ವೆಸ್ಟ್‌ಕೋಸ್ಟ್ ಕೆಮಿಕಲ್ಸ್

ಇಲ್ಲಿ ಕೀಟನಾಶಕ ಮತ್ತು ಇತರ ರಾಸಾಯನಿಕ ಘಟಕ ತಯಾರಿಕೆಯನ್ನು ನೋಡಿ ತಿಳಿದುಕೊಳ್ಳಬಹುದು. ವೀಕ್ಷಣೆ ವೇಳೆ ಜಾಗರೂಕತೆ ಅಗತ್ಯ.

**ಮಂದಾರ್ತಿ: ದುರ್ಗಾಪರಮೇಶ್ವರಿ ಅಮ್ಮನವರು**

ಮಾರ್ಗ: ಬ್ರಹ್ಮಾವರ-ಬಾರ್ಕೂರು-ಮಂದಾರ್ತಿ
ದೂರ: ೧೬ ಕಿ.ಮೀ.



ಪಾತಾಳದಲ್ಲಿರುವ ನಾಗಕನ್ಯೆಯರಾದ ಮಂದರತಿ, ನಾಗರತಿ, ನೀಲರತಿ, ಚಾರುರತಿ, ದೇವರತಿ ಎನ್ನುವ ಪಂಚಕನ್ಯೆಯರು ವನಸಿರಿಯನ್ನು ಕಂಡು ಬೆರಗಾಗಿ ನೆಲೆನಿಂತ ಪುಣ್ಯ ಸ್ಥಳವಾಗಿದೆ. ಮಕ್ಕಳ ಪ್ರಾಪ್ತಿಗಾಗಿ ಬೆಳಕಿನ ಸೇವೆಯನ್ನು ಯಕ್ಷಗಾನದ ಮೂಲಕ ನೀಡುವ ಸಂಪ್ರದಾಯವಿದೆ. ಇಂದಿಗೂ ಸಾವಿರಾರು ಜನರಿಗೆ ನಿತ್ಯ ಅನ್ನ ದಾಸೋಹ ನಡೆಯುತ್ತದೆ. ಇಲ್ಲಿ ೪ ಯಕ್ಷಗಾನ ಮೇಳಗಳು ಭಕ್ತಾದಿಗಳ ಮನ ಬೆಳಗುತ್ತಿವೆ.

**ಕೊಕ್ಕರ್ಣೆ – ಸೂರಾಲು ಅರಮನೆ,**
**ಮಹಾಲಿಂಗೇಶ್ವರ ನಾಲ್ಕುರು ಜೋಮ್ಲು ತೀರ್ಥ**

ಮಾರ್ಗ: ಬ್ರಹ್ಮಾವರ-ಕೊಕ್ಕರ್ಣೆ-ಸೂರಾಲು
ದೂರ: ೨೩ ಕಿ.ಮೀ.



ಇದು ಇತಿಹಾಸ ಪ್ರಸಿದ್ಧ ಸ್ಥಳ. ಹಿಂದೆ ಒಂದು ಕಾಲು ಕಿ.ಮೀ ವಿಸ್ತಾರವುಳ್ಳ ಈ ಅರಮನೆ ಇಂದು ತೀರಾ ಶಿಥಿಲಾವಸ್ಥೆಯಲ್ಲಿದೆ. ಅಳುಪರ ಸಾಮಂತರು ಆಳಿದ ಚೋಳ ಮನೆತನಕ್ಕೆ ಸೇರಿದ ಸ್ಮಾರಕವಾಗಿದೆ. ಭಾರತೀಯ ಪುರಾತತ್ವ ಇಲಾಖೆಯಿಂದ ಮಾನ್ಯತೆ ಪಡೆದಿದೆ.

ಸೂರಾಲು ಅರಮನೆಯ ಹತ್ತಿರದಲ್ಲಿದ್ದು ಕಲ್ಲಿನ ಉಂಗುರ ಮಾದರಿಯಲ್ಲಿದ್ದು ಒಂದರೊಳಗೊಂದು ಸರಪಣಿಯ ವಿಶೇಷತೆ ಇದೆ. ಇದು ಚಾರಣ ಸ್ಥಳವಾಗಿದ್ದು ಸುಂದರವಾಗಿದೆ. ಜಲಪಾತವಿದ್ದು ವೀಕ್ಷಣೆ ವೇಳೆ ಎಚ್ಚರ ಅಗತ್ಯ.

**ಮೆಕ್ಕೆ ಕಟ್ಟು – ನಂದಿಕೇಶ್ವರ**

ಮಾರ್ಗ: ಬ್ರಹ್ಮಾವರ-ಸ್ಯಾಬ್ರಕಟ್ಟೆ-ಶಿರಿಯಾರ
ದೂರ: ೨೦ ಕಿ.ಮೀ.



ಹಿಂದೆ ಅಶ್ವಮೇಧ ಯಾಗಮಾಡುವ ಸ್ಥಳವಾದುದರಿಂದ ಮೇಕೆಯನ್ನು ತಂದು ಕಟ್ಟುತ್ತಿದ್ದರಾದ್ದರಿಂದ ಮೇಕೆ ಕಟ್ಟು ಎಂಬ ಹೆಸರು ಬಂತು. ಈಗ ಇದು ಮೆಕ್ಕೆ ಕಟ್ಟು ಎಂದಾಗಿದೆ. ಈಶ್ವರ ಹಣಗಳ ಪ್ರತೀಕವಾಗಿ ವಿವಿಧ ಕೆತ್ತನೆಯ ಸುಮಾರು ೧೭೦ ವಿಗ್ರಹಗಳು ಇಲ್ಲಿವೆ. ಪ್ರತಿ ಸಂಕ್ರಮಣದ ದಿನ ಅನ್ನ ಸಂತರ್ಪಣೆ ಇದೆ.

**ಪಡುಮುಂಡು-ಕಲ್ಲು ಗಣಪತಿ ದೇವಸ್ಥಾನ**

ಮಾರ್ಗ: ಉಡುಪಿ-ಸ್ಯಾಬ್ರಕಟ್ಟೆ-ಶಿರಿಯಾರ
ದೂರ: ೧೩ ಕಿ.ಮೀ.

ಮೆಕ್ಕೆಕಟ್ಟು ಸಮೀಪದಲ್ಲಿರುವ (೧ ಕಿ.ಮೀ) ಇದು ಸಂಪೂರ್ಣ ಕಲ್ಲಿನಿಂದ ರಚಿತವಾದ ಗುಹಾಂತ ದೇವಾಲಯವಾಗಿದೆ. ಶಿಲ್ಪಿಗಳ ಕೈಚಾತುರ್ಯವನ್ನು ಮಕ್ಕಳೆಲ್ಲಾ ಆಸ್ವಾಧಿಸುವ ಸ್ಥಳವಾಗಿದೆ.

**ನೀಲಾವರ-ಮಹಿಷಮರ್ಧಿನೀ ದೇವಾಲಯ**

ಮಾರ್ಗ: ಉಡುಪಿ-ಬ್ರಹ್ಮಾವರ-ಹೆಬ್ರಿ
ದೂರ: ೧೩ ಕಿ.ಮೀ.



ನೀಲಾವರ ಪ್ರಸಿದ್ಧ ಪುಣ್ಯ ಕ್ಷೇತ್ರಗಳಲ್ಲಿ ಒಂದಾಗಿದೆ. ಸೀತಾನದಿಯ ದಡದ ಮೇಲೆ ಇರುವ ಇದು ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ಬ್ರಹ್ಮಾವರ ಹೆಬ್ರಿ ಮಾರ್ಗದಲ್ಲಿ ಕುಂಜಾಲಿನಿಂದ ೩ ಕಿ.ಮೀ. ಉತ್ತರಕ್ಕೆ ಚಲಿಸಿದರೆ ಪ್ರಶಾಂತ ವಾತಾವರಣದ ಸೀತಾನದಿಯ ತಟದಲ್ಲಿ ಕಂಗೊಳಿಸುವ ಮಹಿಷಮರ್ಧಿನೀ ದೇವಾಲಯ ಅಪಾರ ಭಕ್ತ ಸಮೂಹವನ್ನು ಹೊಂದಿ ಪ್ರಸಿದ್ಧಿ ಪಡೆದಿದೆ. ಜಗತ್ತಿನಲ್ಲಿಯೇ ಅಪೂರ್ವವಾದ ಅತ್ಯಂತ ಪ್ರಾಚೀನವಾದ ರುದ್ರಾಕ್ಷಿ ಶಿಲೆಯಿಂದ ನಿರ್ಮಿತವಾದ ಶ್ರೀದೇವಿಯ ಚತುರ್ಬಾಹು ವಿಗ್ರಹ ಇಲ್ಲಿ ಕಾಣಬಹುದು. ಗಾಲವತೀರ್ಥ, ವ್ಯಾಘ್ರ, ವೀರಭದ್ರ ದೇವರಗುಡಿ ದೇವಾಲಯದ ಪಕ್ಕದಲ್ಲಿದೆ. ಸಮೀಪದಲ್ಲಿ ಕಲ್ಕುಡ್ಕ ಗುಡಿ ಇದೆ. ಅನತಿ ದೂರದಲ್ಲಿ ಪಂಚಮಿಖಾನ ಸುಬ್ರಹ್ಮಣ್ಯ ಗುಡಿ ಮತ್ತು ಪಂಚಮೀ ತೀರ್ಥ ಸ್ನಾನಘಟ್ಟವಿದೆ. ಇಲ್ಲಿ ಪುರಾತನವಾದ ಕಲ್ಲಿನ ಶಾಸನಗಳಿವೆ. ಸಮೀಪದಲ್ಲಿ ವಿಶಾಲವಾದ ನೂರಾರು ಸಂಖ್ಯೆಗಳುಳ್ಳ ಗೋಶಾಲೆ ಇದೆ. ೬ ಅಡಿ ಗಂಧದ ವೀರಭದ್ರನ ಮೂರ್ತಿ ಅಪರೂಪವಾಗಿದ್ದು, ಕರ್ನಾಟಕದಲ್ಲೇ ಪ್ರಥಮವೆನ್ನಬಹುದಾಗಿದೆ. ನೀಲಾವರದಲ್ಲಿ ನಿತ್ಯ ಅನ್ನ ದಾಸೋಹ ನಡೆಯುತ್ತದೆ.

**ಕೋಟ – ಹಿರೇಮಹಾಲಿಂಗೇಶ್ವರ**

ಮಾರ್ಗ: ಉಡುಪಿ-ಬ್ರಹ್ಮಾವರ-ಕೋಟ
ದೂರ: ೧೫ ಕಿ.ಮೀ.



**ಹಿರೇಮಹಾಲಿಂಗೇಶ್ವರ :** ಇದೊಂದು ಇತಿಹಾಸ ಪೂರ್ವ ದೇವಾಲಯವಾಗಿದ್ದು ಶಿಲೆಯಿಂದ ರೂಪಿತವಾಗಿದೆ. ಇಲ್ಲಿ ಚೋಳ, ಚಾಲುಕ್ಯ ಮತ್ತು ಹೊಯ್ಸಳ ಶಿಲ್ಪ ಕಲೆಯನ್ನು ಹೊಂದಿದೆ. ವಿಜಯನಗರದ ಅರಸ ಬುಕ್ಕರಾಯನ ಉಲ್ಲೇಖವಿದೆ. ಗಜಪ್ರಷ್ಠಾಕಾರದ ಕಲ್ಲಿನ ಗೋಪುರ, ಬೇಲೂರಿನ ಚನ್ನಕೇಶವ ದೇವಾಲಯದ ಶಿಲಾಬಾಲಿಕೆಯರನ್ನು ಹೋಲುವ ಕೆತ್ತನೆಗಳಿವೆ.

**ಕೋಟಾ ಅಮೃತೇಶ್ವರಿ:**



ದೇವಿಯ ಸ್ಥಾನದಲ್ಲಿ ಏಕಶಿಲಾ ರಕ್ತೇಶ್ವರಿ, ಪರಿವಾರ ದೇವತೆಗಳಾದ ವೀರಭದ್ರನ ಗುಡಿ, ನಾಗ, ಬೊಬ್ಬರ್ಯ, ಉಮ್ಮಲ್ತಿ ಇತ್ಯಾದಿ ದೇವರ ಗುಡಿಗಳಿವೆ. ದೇವಳದ ಉತ್ತರದಲ್ಲಿ ವಿಶಾಲವಾದ "ವರುಣ ತೀರ್ಥ" ಸರೋವರ ಇದೆ. ಅನತಿ ದೂರದಲ್ಲಿ ಶ್ರೀ ರಾಜಶೇಖರ ದೇವಾಲಯವಿದೆ. ಶ್ರೀ ದೇವಿಯ ಸನ್ನಿಧಿಯಲ್ಲಿ ಶಿವಲಿಂಗವು ಉದ್ಭವಿಸುವುದು. ಅಮೃತೇಶ್ವರಿ ಯಕ್ಷಗಾನ ಮೇಳವಿದೆ.

# ಉಡುಪಿ ತಾಲ್ಲೂಕು ಪ್ರವಾಸಿ ತಾಣಗಳು

ಶ್ರೀ ಕೃಷ್ಣ ಕ್ಷೇತ್ರ, ಅಂಬಾಲಪಾಡಿ, ಮಲ್ಪೆ, ಸೈಂಟ್ ಮೇರಿಸ್ ದ್ವೀಪ ಮಲ್ಪೆ (ತೋನ್ಸೆ ಪಾರ್), ಟೆಬ್ಮಾ ಶಿಪ್‌ಯಾರ್ಡ, ಉದ್ಯಾವರ, ಕಾಪು ದೀಪಸ್ತಂಭ, ಕುಂಜಾರು ಗಿರಿ, ಪಾಜಕ, ನಾಗಾರ್ಜುನ, ಸುಜ್ಲಾನ್

**ಉಡುಪಿ ಶ್ರೀ ಕೃಷ್ಣ ಕ್ಷೇತ್ರ**

ಕೇಂದ್ರ: ಉಡುಪಿ
ಮಾರ್ಗ: ರಥಬೀದಿ
ದೂರ: ೦.೫ ಕಿ.ಮೀ.



ಐತಿಹಾಸಿಕ ಮಹತ್ವವುಳ್ಳ ಧಾರ್ಮಿಕ ಕ್ಷೇತ್ರ ಇದಾಗಿದೆ. ದ್ವೈತ ಮತ ಸ್ಥಾಪಕ ಶ್ರೀ ಮಧ್ವಾಚಾರ್ಯರಿಂದ ಪ್ರತಿಸ್ಥಾಪಿಸಲ್ಪಟ್ಟ ಕ್ಷೇತ್ರ. ಅಷ್ಟ ಮಠಗಳು ಇಲ್ಲಿವೆ (ಕಾಣಿಯೂರ, ಶಿರೂರು, ಪುತ್ತಿಗೆ, ಕೃಷ್ಣಾಪುರ, ಸೋದೆ, ಅದಮಾರು, ಪಲಿಮಾರು. ಪೇಜಾವರ) ಇಲ್ಲಿ ನೋಡತಕ್ಕ ಸ್ಥಳಗಳು: ಅನಂತೇಶ್ವರ ದೇವಸ್ಥಾನ, ಚಂದ್ರಮೌಳೀಶ್ವರ ದೇವಸ್ಥಾನ, ಮಧ್ವ ಸರೋವರ, ಕನಕನ ಕಿಂಡಿ, ಗೀತಾಮಂದಿರ, ನವಗ್ರಹ ದೇವಸ್ಥಾನ, ಗೋಶಾಲೆ, ಕಟ್ಟಿಗೆ ರಥ, ಪ್ರತೀ ೨ ವರ್ಷಕ್ಕೊಮ್ಮೆ ಪರ್ಯಾಯ ಉತ್ಸವ ಹಾಗೂ ವರ್ಷಂಪ್ರತಿ ಶ್ರೀ ಕೃಷ್ಣ ಜನ್ಮಾಷ್ಟಮಿ ವಿಶೇಷವಾಗಿದೆ. ಪ್ರತೀ ದಿನ ಅನ್ನಸಂತರ್ಪಣೆ ಇದೆ.

**ಅಂಬಾಲಪಾಡಿ**

ಕೇಂದ್ರ: ಉಡುಪಿ
ಮಾರ್ಗ: ರಾ.ಹೆ. ಪಶ್ಚಿಮ
ದೂರ: ೦.೯ ಕಿ.ಮೀ.



ಶ್ರೀ ಜನಾರ್ದನ ಮತ್ತು ಮಹಾಂಕಾಳಿ ದೇವಾಲಯವು ಪುರಾತನವಾದುದು. ಇದೀಗ ಶಿಲಾಮಯಮಾಗಿ ಪರಿವರ್ತನೆ ಹೊಂದಿದ್ದು ಪ್ರಸಿದ್ಧಿಯನ್ನು ಪಡೆದಿದೆ. ಪ್ರತೀ ಶುಕ್ರವಾರ ಅನ್ನ ಸಂತರ್ಪಣೆ ಇದೆ. ಮಹಿಳೆಯರು ಬಹಳವಾಗಿ ಆಗಮಿಸುತ್ತಾರೆ. ಪ್ರತೀ ಸಂಕ್ರಾಂತಿಗೆ ದರ್ಶನ ಸೇವೆ ಇದೆ.

**ಮಲ್ಪೆ**

ಮಾರ್ಗ: ಉಡುಪಿ-ಮಲ್ಪೆ
ದೂರ: ೫ ಕಿ.ಮೀ.




ಇದು ದೊಡ್ಡ ಮೀನುಗಾರಿಕಾ ಬಂದರು. ಪಕ್ಕದಲ್ಲೇ ವಡಭಾಂಡೇಶ್ವರ ಸಮುದ್ರ ಕಿನಾರೆ ಮತ್ತು ಬಲರಾಮ ದೇವಾಲಯವಿದೆ. ಟೆಬ್ಮಾ ಹಡಗು ನಿರ್ಮಾಣ ಕೇಂದ್ರವಿದೆ. ಪ್ರವಾಸೋದ್ಯಮ ಕೇಂದ್ರ ಸ್ಥಾನ. ಎಳ್ಳಮವಾಸ್ಯೆ ದಿನ ಲಕ್ಷಾಂತರ ಜನ ಸಮುದ್ರ ಸ್ನಾನ ಮಾಡುತ್ತಾರೆ. ಪ್ರತೀ ದಿನ ಸಂಜೆ ಸೂರ್ಯಾಸ್ತಮಾನ ವೀಕ್ಷಿಸಲು ಬರುವವರ ಸಂಖ್ಯೆ ಅಪಾರ. ಮೀನುಗಾರಿಕೆಗೆ ಸಂಬಂಧಿಸಿದ ದೋಣಿ, ಬಲೆ ಇನ್ನಿತರ ಪರಿಕರಗಳನ್ನು ಕಾಣಬಹುದು. ಇದು ರಾಷ್ಟ್ರೀಯ ಹೆದ್ದಾರಿಯ ಪಶ್ಚಿಮ ಭಾಗದಲ್ಲಿದೆ. ಉತ್ತಮ ಕಡಲ ತೀರವಿದೆ.

**ಸೈಂಟ್ ಮೇರಿಸ್ ದ್ವೀಪ ಮಲ್ಪೆ (ತೋನ್ಸೆ ಪಾರ್)**

ಮಾರ್ಗ: ಉಡುಪಿ-ಮಲ್ಪೆ
ದೂರ: ೧೦ ಕಿ.ಮೀ.



**ಟೆಬ್ಮಾ ಶಿಪ್‌ಯಾರ್ಡ್, ಮಲ್ಪೆ**

ಮಾರ್ಗ: ಉಡುಪಿ-ಮಲ್ಪೆ
ದೂರ: ೫ ಕಿ.ಮೀ.



ಭಾರತದ ಅತಿ ದೊಡ್ಡ ಶಿಪ್‌ಯಾರ್ಡ್ ಕಂಪೆನಿಯಾಗಿದೆ. ನೂರು ಬಗೆಯ ಹಡಗುಗಳನ್ನು ತಯಾರಿಸಿ ರವಾನಿಸಲಾಗುತ್ತದೆ. ಹೊಳೆತ್ತುವ ಯಂತ್ರಗಳನ್ನು ಒದಗಿಸುತ್ತದೆ.

**ಉದ್ಯಾವರ**

ಮಾರ್ಗ: ಉಡುಪಿ-ಉದ್ಯಾವರ
ದೂರ: ೪ ಕಿ.ಮೀ.



ಉದ್ಯಾವರದಲ್ಲಿ ಆಳುಪರ ಕೋಟೆಯ ಅವಶೇಷಗಳನ್ನು ನೋಡಬಹುದು. ಶಂಭುಕಲ್ಲು ದೇವಸ್ಥಾನ ಅತ್ಯಂತ ಪ್ರಾಚೀನ ದೇವಸ್ಥಾನವಾಗಿದಲದು. ಪ್ರಾಚೀನ ವಾಸ್ತು ಶಿಲ್ಪಕ್ಕೆ ಪ್ರಸಿದ್ಧವಾಗಿದೆ. ಹತ್ತಿರದಲ್ಲಿ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದಿಕ್ ಕಾಲೇಜು ಇದೆ. ಅನೇಕ ಔಷಧೀಯ ಸಸ್ಯಗಳನ್ನು ಕಾಣಬಹುದು. ಸಂಧ್ಯಾ ವೀಕ್ಷಣೆಗೂ ಅವಕಾಶವಿದೆ.

**ಕಾಪು ದೀಪಸ್ತಂಭ**

ಮಾರ್ಗ: ಉಡುಪಿ-ಕಟಪಾಡಿ-ಕಾಪು
ದೂರ: ೧೨ ಕಿ.ಮೀ.



ಶತಮಾನದಷ್ಟು ಹಳೆಯ ಕಾಪು ದೀಪಸ್ತಂಭ ಕಡಲ ತೀರಕ್ಕೆ ವಿಶೇಷ ಮೆರಗು. ಹೆಬ್ಬಂಡೆಗಳಿಗೆ ಅಬ್ಬರಿಸುವ ಕಡಲ ಅಲೆಗಳ ಮೋಹಕ ದೃಶ್ಯ ರುದ್ರ ರಮಣೀಯವಾಗಿದೆ. ಸೂರ್ಯಾಸ್ಥ ನೋಡಲು ಸಾವಿರಾರು ಜನ ಬರುತ್ತಾರೆ. ಕಾಪು ಪೇಟೆಯಲ್ಲಿರುವ ಮಾರಿಯಮ್ಮನ ಗುಡಿ ಬಹಳ ಪ್ರಸಿದ್ಧಿ ಪಡೆದಿರುತ್ತದೆ. ಇದರಲ್ಲಿ ಹಳೆ ಮಾರಿ ಗುಡಿ ಮತ್ತು ಹೊಸ ಮಾರಿ ಗುಡಿ ಇದ್ದು, ವರ್ಷಂಪ್ರತಿ ಮಾರಿ ಜಾತ್ರೆ ಜರಗುತ್ತದೆ.

**ಕುಂಜಾರು ಗಿರಿ**


ಮಾರ್ಗ: ಉಡುಪಿ-ಕಟಪಾಡಿ-ಶಿರ್ವ
ದೂರ: ೧೨ ಕಿ.ಮೀ.



ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನವು ಬೆಟ್ಟದ ಮೇಲಿದೆ. ಆಧ್ಯಾತ್ಮಿಕ ಹಾಗೂ ಪರಿಸರ ಪ್ರೇಮಿಗಳಿಗೆ / ಚಾರಣ ಪ್ರಿಯರಿಗೆ ಇದು ಸಂತಸ ನೀಡುತ್ತದೆ. ಪಕ್ಕದ ಬೆಟ್ಟದ ಮೇಲೆ ಶ್ರೀ ಪರಶುರಾಮ ದೇವಸ್ಥಾನವಿದೆ. ಇಲ್ಲಿ ಆಚಾರ್ಯ ಮಧ್ವರಿಂದ ನಿರ್ಮಿತಗೊಂಡ ಬಾಣ, ಪರಶು, ಗದಾ

ಮತ್ತು ಚಕ್ರತೀರ್ಥಗಳನ್ನು ನೋಡಲು ಸಾಧ್ಯ. ಜಗದ್ಗುರು ಶ್ರೀ ಮಧ್ವಾಚಾರ್ಯರ ಅವತಾರ ಕ್ಷೇತ್ರವಾದ ಪಾಜಕದಲ್ಲಿ ವಿಮಾನಗಿರಿ ಎನಿಸಿರುವ ದುರ್ಗಾ ಬೆಟ್ಟದಲ್ಲಿ ಶ್ರೀ ಪರಶುರಾಮರು

**ಪಾಜಕ**



ಶ್ರೀ ದುರ್ಗೆಯನ್ನು ಪ್ರತಿಷ್ಠಾಪಿಸಿದರು ಎಂಬುದು ನೆಹ್ಯ. ಪೂರ್ವ ದಿಕ್ಕಿನಲ್ಲಿ ಜಗದ್ಗುರು ಮಧ್ವರು ಅವತರಿಸಿದ ಮತ್ತು ಬಾಲ್ಯವನ್ನು ಕಳೆದಿರುವ ಪಾಜಕ ಕ್ಷೇತ್ರ ಮೆರೆಯುತ್ತಿದೆ. ಇಲ್ಲಿ ಶ್ರೀ ಅನಂತ ಪದ್ಮನಾಭ ದೇವಸ್ಥಾನವಿದೆ. ಕುಂಜಾರುಗಿರಿಯ ದುರ್ಗಾ ಬೆಟ್ಟವು ಸಮುದ್ರದಿಂದ ಸುಮಾರು ೧೭೫ ಅಡಿ ಎತ್ತರದಲ್ಲಿದೆ. ಆದ್ದರಿಂದ ದುರ್ಗೆಯ ಸಂದರ್ಶನಕ್ಕೆ ಬರುವವರು ಸುಮಾರು ೨೫೭ ಮೆಟ್ಟಿಲುಗಳನ್ನು ಏರಿ ಬರಬೇಕಾಗಿದೆ. ಬೆಟ್ಟದ ನಾಲ್ಕು ತುದಿಯಲ್ಲಿ ಮೇಲೇರಲು ದಾರಿಗಳಿದ್ದರೂ ದಕ್ಷಿಣದಲ್ಲಿ ಕಾಲ್ನಡಿಗೆಯಿಂದ ಪಶ್ಚಿಮದಲ್ಲಿ ವಾಹನದ ಮೂಲಕ ಬರಲು ಅವಕಾಶವಿದೆ.

**ನಾಗಾರ್ಜುನ**

ಮಾರ್ಗ: ಉಡುಪಿ-ಪಡುಬಿದ್ರೆ-ಕಾರ್ಕಳ
ದೂರ: ೨೮ ಕಿ.ಮೀ.



ಪಡುಬಿದ್ರೆಯಿಂದ ೫ ಕಿ.ಮೀ. ದೂರದ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರ ರೂಪಿತಗೊಂಡಿದೆ. ಇದು ಈ ಭಾಗದ ಮಿದ್ಯುತ್ ಸಮಸ್ಯೆ ನೀಗಿಸುವಲ್ಲಿ ಪ್ರಮುಖ ಪಾತ್ರ ವಹಿಸಬಹುದು. ವೀಕ್ಷಿಸಬಹುದಾದ ಘಟಕ. ಈ ಬಗ್ಗೆ ಮುಂಚಿತವಾಗಿ ಅನುಮತಿ ಪತ್ರ ಪಡೆಯ ಬೇಕಾಗಿರುತ್ತದೆ.

**ಸುಜ್ಲಾನ್**

ಮಾರ್ಗ: ಉಡುಪಿ-ಪಡುಬಿದ್ರೆ-ಕಾರ್ಕಳ
ದೂರ: ೨೩ ಕಿ.ಮೀ.



ಹೆಜಮಾಡಿ ಸಮೀಪ ಪವನ ವಿದ್ಯುತ್ ತಯಾರಿಕಾ ಘಟಕ ಸುಜ್ಲಾನ್ ಇದೆ. ಕಾಮಗಾರಿ ನಿರ್ಮಾಣ ಹಂತದಲ್ಲಿದ್ದು, ವೀಕ್ಷಿಸಬಹುದಾದ ಘಟಕ. ಈ ಬಗ್ಗೆ ಮುಂಚಿತವಾಗಿದ ಅನುಮತಿ ಪತ್ರ ಪಡೆಯಬೇಕಾಗಿರುತ್ತದೆ. ಪಡುಬಿದ್ರಿಯಲ್ಲಿ ಪ್ರಾಚೀನ ಗಣಪತಿ ದೇವಸ್ಥಾನವಿದೆ.

# ಉಡುಪಿ ತಾಲ್ಲೂಕು ಪ್ರವಾಸಿ ತಾಣಗಳು

**ಕೊಲ್ಲೂರು – ಮೂಕಾಂಬಿಕ ಅಭಯಾರಣ್ಯ, ಬೈಂದೂರು – ಮರವಂತೆ ಬೀಚ್, ಕಿರಿ ಮಂಜೇಶ್ವರ – ಅಗಸ್ತ್ಯೇಶ್ವರ ದೇವಾಲಯ, ಕೊಲ್ಲೂರು – ಕೊಡಚಾದ್ರಿ, ವೆಂಕಟರಮಣ ದೇವಸ್ಥಾನ, ಅನಂತಶಯನ ದೇವಸ್ಥಾನ, ಸರ್ಕಾರಿ ಸಂಯುಕ್ತ ಪ್ರೌಢ ಶಾಲೆ ಪೆರ್ವಾಜೆ, ಚತುರ್ಮುಖ ಬಸದಿ, ಕಾರ್ಕಳ – ಗೊಮ್ಮಟೇಶ್ವರ, ಆನೆಕೆರೆ ಮತ್ತು ರಾಮಸಮುದ್ರ, ಹಿರಿಯಂಗಡಿ – ಮಾನಸ್ತಂಭ, ಶಿಲ್ಪ ಗ್ರಾಮ – ಶಿರವಂತೆ, ವರಂಗ – ಬಸದಿ, ಹೆಬ್ರಿ-ಕೂಡ್ಲು ತೀರ್ಥ, ಕಾಂತವರ – ದೇವಸ್ಥಾನ, ಅತ್ತೂರು – ಸಂತ ಲಾರೆನ್ಸ್ ಚರ್ಚ್, ಮಿಯ್ಯಾರು – ಸಿ.ಇ. ಕಾಮತ್ ಕರಕುಶಲ ತರಬೇತಿ ಕೇಂದ್ರ, ನಿಟ್ಟೆ ವಿದ್ಯಾ ಸಂಸ್ಥೆಗಳು**

**ಕೊಲ್ಲೂರು – ಮೂಕಾಂಬಿಕ ಅಭಯಾರಣ್ಯ**

ಮಾರ್ಗ: ಉಡುಪಿ- ಕುಂದಾಪುರ- ಕೊಲ್ಲೂರು
ದೂರ: ೭೦ ಕಿ.ಮೀ.



ಎಲ್ಲಾ ಜಾತಿಯ ಕಾಡು ಪ್ರಾಣಿ ಮತ್ತು ಪಕ್ಷಿಗಳು ಇಲ್ಲಿ ವಾಸವಾಗಿವೆ. ವಿಶೇಷವೆಂದರೆ ಕುವಸುರನೆಂಬ ರಾಕ್ಷಸ ವಾಸ ಮಾಡಿದ್ದ ಕಲ್ಲಿನ ಮಂಚ ಈಗಲೂ ಇದೆ. ವಿವಿಧ ಜಾತಿಯ ಮರ ಗಿಡಗಳು, ಪ್ರಾಣಿಪಕ್ಷಿಗಳು ಅರಣ್ಯದ ಮಧ್ಯಭಾಗಲ್ಲಿ ಸಂಚರಿಸುತ್ತವೆ.

**ಬೈಂದೂರು – ಮರವಂತೆ ಬೀಚ್**

ಮಾರ್ಗ: ಉಡುಪಿ- ಕುಂದಾಪುರ- ಬೈಂದೂರು
ದೂರ: ೪೮ ಕಿ.ಮೀ.



ಪಶ್ಚಿಮ ಭಾಗ ಅರಬ್ಬೀ ಸಮುದ್ರ, ಪೂರ್ವಭಾಗದ ಸೌಪರ್ಣಿಕಾ ತೀರದ ಭವ್ಯ ಕಲ್ಪನೆಯನ್ನು ಕಾಣುವ ಮನೋಹರ ಬೀಚ್ ಸಂಜೆ ಸೂರ್ಯಸ್ತದ ವೇಳೆ ಮನೋಹರ ಅನುಭವ. ಸುದೀರ್ಘವಾದ ಬೀಚ್ ಹೊಂದಿದ್ದು, ನದಿಯಲ್ಲಿ ಸಂಚರಿಸಲು ಬೋಟಿಂಗ್ ವ್ಯವಸ್ಥೆ ಇದೆ. ಸಮೀಪದಲ್ಲಿ ವರಹಾಸ್ವಾಮಿ ದೇವಸ್ಥಾನವಿದೆ. ಮಳೆ ಬಾರದಿದ್ದಾಗ ಇಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಳೆ ಬರಿಸಿಕೊಳ್ಳುವ ಪ್ರತೀತಿ ಇದೆ. ಹತ್ತಿರದಲ್ಲಿ ಕುರು ಎಂಬ ಚಿಕ್ಕ ದ್ವೀಪದಂತೆ ಕಾಣುವ ಬಯಲು ಪ್ರದೇಶವಿದೆ. ಬಹಳ ಹತ್ತಿರದಿಂದ ಬೋಟ್‌ನಿಂದ ಮೀನುಗಾರಿಕೆ ಮಾಡುವುದನ್ನು ನೋಡಬಹುದು.

**ಕಿರಿ ಮಂಜೇಶ್ವರ – ಅಗಸ್ತ್ಯೇಶ್ವರ ದೇವಾಲಯ**

ಮಾರ್ಗ: ಉಡುಪಿ- ಕುಂದಾಪುರ
ದೂರ: ೫೭ ಕಿ.ಮೀ.



ಅಗಸ್ತ್ಯ ಮುನಿಯು ತಪಸ್ಸು ಮಾಡಿ ಸಮುದ್ರ ದಡದಲ್ಲಿ ವಾಸವಾಗಿದ್ದ ಈ ಮುನಿಯ ವಾಸದಿಂದ ಇಲ್ಲಿಯ ಸುತ್ತ ಮುತ್ತ ಊರು ಸೇರಿ ಕಿರಿಮಂಜೇಶ್ವರ ಎಂಬ ಬಿರುದಾಯಿತು. ಇಲ್ಲಿ ಅಗಸ್ತ್ಯೇಶ್ವರ ಗಣಪತಿ ಮತ್ತು ವಿಶಾಲಾಕ್ಷಿ ದೇವಸ್ಥಾನವಿದೆ. ವರ್ಷಕೊಮ್ಮೆ ಜಾತ್ರೆ ನಡೆಯುತ್ತದೆ. ಇದು ವರ್ಷದ ಕೊನೆಯ ಜಾತ್ರೆಯಾಗಿರುತ್ತದೆ.

**ಕೊಲ್ಲೂರು – ಕೊಡಚಾದ್ರಿ**

ಮಾರ್ಗ: ಉಡುಪಿ- ಕುಂದಾಪುರ- ಕೊಲ್ಲೂರು
ದೂರ: ೧೧೫ ಕಿ.ಮೀ.



ಕೊಲ್ಲೂರಿನಿಂದ ಪೂರ್ವದ ದಿಗಂತವನ್ನು ದಿಟ್ಟಿಸಿದಾಗ ಕಾಣಸಿಗುವ ಪಶ್ಚಿಮ ಘಟ್ಟದ ಬೆಟ್ಟ ಕೊಡ ಕೊಡಚಾದ್ರಿ ಚಾರಣಿಗರಿಗೆ ಸ್ವರ್ಗ. ಭಕ್ತ ಬಾವುಕರಿಗೆ ಕೈಲಾಸ. ಸುಮಾರು ಕೊಲ್ಲೂರಿನಿಂದ ೧೪ ಕಿ.ಮೀ. ದೂರದಲ್ಲಿದೆ ಸಮುದ್ರ ಮಟ್ಟದಿಂದ ೧೩೪೩ ಮೀ. ಎತ್ತರದಲ್ಲಿದೆ. ಆದಿಶಂಕರರ ಸರ್ವಜ್ಞ ಪೀಠವೂ ಇಲ್ಲಿದೆ. ಬೆಟ್ಟದ ಮೇಲೆ ಮೋಡಗಳ ಸಾಲು ಸಾಲು ಬದಿಯಿಂದ ಸಾಗುತ್ತದೆ. ಶಂಕರಾಚಾರ್ಯರು ತಪಸ್ಸು ಮಾಡಿದ ಸ್ಥಳ ಚಿತ್ರಮೂಲ ಬಹಳ ಪ್ರಸಿದ್ಧವಾಗಿದೆ. ಇಲ್ಲಿಯ ವಿಶೇಷ ಸೂರ್ಯಾಸ್ತಮಾನ ಹಾಗು ಸೂರ್ಯೋದಯವನ್ನು ನೋಡಬಹುದು. ಇಲ್ಲಿ ಸರ್ಕಾರಿ ವಸತಿ ಗೃಹವಿದೆ. ಈ ಸುಂದರ ತಾಣ ಚಾರಣಿಗರಿಗೆ ಭೂ ವೈಕುಂಠ. ಇದು ೫ ತಾಸುಗಳ ಕಾಲ್ನಡಿಗೆಯ ಮೂಲಕ ಯಾ ಬಾಡಿಗೆಯ ಜೀಪ್ ಮೂಲಕ ಕೊಲ್ಲೂರಿನಿಂದ ಪಯಣಿಸಬಹುದು.

**ವೆಂಕಟರಮಣ ದೇವಸ್ಥಾನ**

ಕೇಂದ್ರ: ಕಾರ್ಕಳ
ದೂರ: ೦.೧ ಕಿ.ಮೀ.




ಗೌಡ ಸಾರಸ್ವ ಬ್ರಾಹ್ಮಣರ ಆರಾಧ್ಯಮೂರ್ತಿ "ವೆಂಕಟರಮಣ ಸ್ವಾಮಿ" ಪಡುತಿರುಪತಿ ಖ್ಯಾತಿಯ ಈ ದೇವಾಲಯ ಕ್ರಿ.ಶ. ೧೪೫೯ರಲ್ಲಿ ಸ್ಥಾಪಿತವಾಯಿತು. ವಿಶ್ವಮಾನ್ಯ ಶಿಲ್ಪಿ ರೆಂಜಾಳ ಗೋಪಾಲಕೃಷ್ಣ ಶೆಣೈ ಅವರು ಹೆಮ್ಮೆಯ ಕೊಡುಗೆಯಾಗಿ ನೀಡಿದ ನೆಲ್ಲಿಕಾರು ಶಿಲೆಯಿಂದ ಕಡಿದ ನಾಲ್ಕು ಕಂಬಗಳು ಶಿಲ್ಪಿ ರೆಂಜಾಳರವರ ಕಲಾ ನೈಪುಣ್ಯಕ್ಕೆ ಒಂದು ಸುಂದರ ನಿದರ್ಶನ. ಸೂಕ್ಷ್ಮಾತಿಸೂಕ್ಷ್ಮ ಇರುವೆ. ಜೇನುನೊಣ, ಮಿಡತೆ, ಫಲ, ಪುಷ್ಪ, ಪ್ರಾಣಿ ಪಕ್ಷಿಗಳ ಕೆತ್ತನೆ ಅತಿ ವಿಶಿಷ್ಠವಾದದ್ದು. ಕೂದಲಷ್ಟು ತೆಳ್ಳಗಿನ ದಾರವನ್ನೇ ಸಂದುಗಳಲ್ಲಿ ತೂರಿಸುವಷ್ಟು ಅದ್ಭುತ ರಚನೆಗಳು. "ವಿಶ್ವಕ್ಕೆ ಹೆಮ್ಮೆಯ ಕೊಡುಗೆ ಈ ಶಿಲ್ಪ" ಎಂಬ ಭಾವನೆ ಕಾರ್ಕಳ ಜನತೆಯವರದು.

**ಅನಂತಶಯನ ದೇವಸ್ಥಾನ**

ಕೇಂದ್ರ: ಕಾರ್ಕಳ
ದೂರ: ೦.೧ ಕಿ.ಮೀ.
(೦೮೨೫೮-೨೩೨೫೪೨, ೯೯೪೫೯೮೪೪೯೫)



ವೈಷ್ಣವ ನಾಮ ಸಂಪ್ರದಾಯದ ಹೊಯ್ಸಳ ಶಿಲ್ಪದ ಮಾದರಿ ದೇವಾಲಯ. ಎರಡು ಪ್ರಾಕಾರಗಳು ಪ್ರಧಾನ ಬಲಿಪೀಠ, ಧ್ವಜಸ್ತಂಭ, ನವರಂಗ, ಸುಖನಾಸಿ ಮತ್ತು ಗರ್ಭಗೃಹಗಳು ಇಲ್ಲಿನ ಮುಖ್ಯ ಅಂಗಗಳು. ಗರ್ಭಗುಡಿಯಲ್ಲಿ ಕರಿಶಿಲೆಯಿಂದ ನಿರ್ಮಿತವಾದ ಮೂರು ಸುರುಳಿ ಸುತ್ತಿರುವ ಏಳು ಹೆಡೆಯ ಆದಿಶೇಷನ ಮೇಲೆ ಶಂಖ, ಚಕ್ರ, ಗದಾ, ಪದ್ಮಧಾರಿಯಾದ ಶೇಷಶಯನ ಮಹಾವಿಷ್ಣುವು ಮಲಗಿದ್ದಾನೆ. ಪಾದಭಾಗದಲ್ಲಿ ಶ್ರೀದೇವಿ ಭೂದೇವಿಯರ ಮೂರ್ತಿಗಳಿವೆ. ಮಿಷ್ಣುವಿನ ನಾಭಿಯಿಂದ ಹೊರಟ ಕಮಲದಲ್ಲಿ ಬ್ರಹ್ಮ ಕುಳಿತಿದ್ದಾನೆ.

**ಸರ್ಕಾರಿ ಸಂಯುಕ್ತ ಪ್ರೌಢ ಶಾಲೆ ಪೆರ್ವಾಜೆ**

(೯೭೪೧೧೫೧೫೭೮)

ಕೇಂದ್ರ: ಕಾರ್ಕಳ



ದಾನಿಗಳ ನೆರವಿನಿಂದ ಅತ್ಯಂತ ಆಕರ್ಷಕವಾಗಿದ್ದು ಶೈಕ್ಷಣಿಕವಾಗಿ ಉತ್ತಮ ಗುಣ ಮಟ್ಟವನ್ನು ಕಾಯ್ದುಕೊಂಡು ಬರುತ್ತಿರುವ ಈ ಶಾಲೆಯು ಯಾವುದೇ ಖಾಸಗಿ ಶಾಲೆಗಿಂತ ಉತ್ತಮ ಮಟ್ಟದಲ್ಲಿದೆ.

**ಚತುರ್ಮುಖ ಬಸದಿ**

ದೂರ: ೨ ಕಿ.ಮೀ.



ಇಮ್ಮಡಿ ಭೈರವರಾಯನಿಂದ ಕ್ರಿ.ಶ. ೧೫೮೬ ರಲ್ಲಿ ನಿರ್ಮಾಣಗೊಂಡಿತ್ತು. ನಾಲ್ಕು ಮುಖವನ್ನು ಹೊಂದಿದೆ. ೨೪ ತೀರ್ಥಂಕರರ ಸಣ್ಣ ವಿಗ್ರಹಗಳಿವೆ. ಪಶ್ಚಿಮ ದ್ವಾರದಲ್ಲಿ ಅರಸನ ಶಾಸನವಿದೆ.

**ಕಾರ್ಕಳ – ಗೊಮ್ಮಟೇಶ್ವರ**

ಕೇಂದ್ರ: ಕಾರ್ಕಳ
ದೂರ: ೨ ಕಿ.ಮೀ.



ಕಾರ್ಕಳದ ಅರಸ ಭೈರವೇಂದ್ರನ ಮಗ ವೀರಪಾಂಡ್ಯನಿಂದ ಸ್ಥಾಪಿತವಾಯಿತು. ಜಗತ್ತಿನ ಎರಡನೇ ಅತಿ ಪ್ರಾಚೀನ ವಿಗ್ರಹವಾಗಿರುವ ಬಾಹುಬಲಿಯ ಈ ಏಕಶಿಲಾ ವಿಗ್ರಹ. ನಿಜವಾಗಿ ಗಾತ್ರದಲ್ಲಿ ಈಜಿಪ್ಟ್ ಕಲಾಕೃತಿಗಳಂತಿದ್ದು ಪ್ರತೀ ೧೨ ವರ್ಷಕೊಮ್ಮೆ ಮಹಾಮಸ್ತಕಾಭಿಷೇಕ ನಡೆಯುತ್ತದೆ.

**ಆನೆಕೆರೆ ಮತ್ತು ರಾಮಸಮುದ್ರ**



೨೫ ಎಕರೆ ವಿಸ್ತೀರ್ಣದ ಕೆರೆ. ಇತ್ತೀಚೆಗೆ ಉದ್ಯಾನವನವೊಂದನ್ನು ಇಲ್ಲಿ ನಿರ್ಮಿಸಲಾಗಿದ್ದು, ಸದ್ಯೋಜಾತ ಪಾರ್ಕ್ ಎಂಬುದಾಗಿ ಹೆಸರಿಸಲಾಗಿದೆ. ವಿವಿಧ ಜಾತಿಯ ಪಕ್ಷಿಗಳು ಇಲ್ಲಿ ವಲಸೆ ಬರುತ್ತವೆ. ಆನೆಕೆರೆ ಪಕ್ಕದಲ್ಲಿರುವುದೇ ಸಿಗಡಿಕೆರೆ. ಹತ್ತಿರದಲ್ಲಿ ರಾಮ ಸಮುದ್ರವೆಂಬ ೪೨ ಎಕರೆ ವಿಸ್ತೀರ್ಣದ ಸರೋವರವಿದೆ. ಕಾರ್ಕಳ ಪುರಸಭೆಗೆ ಣೆರು ಸರವರಾಜು ಇದರಿಂದ ದೊರೆಯುತ್ತದೆ. ತೋಟಗಾರಿಕೆ ಮತ್ತು ಮೀನುಗಾರಿಕೆ ವಿಶೇಷ ಆಸಕ್ತಿ ವಹಿಸಿದೆ.

**ಹಿರಿಯಂಗಡಿ – ಮಾನಸ್ತಂಭ**

ಕೇಂದ್ರ: ಕಾರ್ಕಳ
ದೂರ: ೧.೫ ಕಿ.ಮೀ.



ಹಿರಿಯಂಗಡಿಯಲ್ಲಿನ ನೇಮಿನಾಥ ಬಸದಿಯ ಎದುರಿನ ೫೨ ೧/೨ ಅಡಿ ಎತ್ತರದ ಏಕಶಿಲಾ ಮಾನಸ್ತಂಭವನ್ನು ಅಭಿನವ ಪಾಂಡ್ಯ ದೇವಪ್ಪೊಡೆಯನು (ಆನೇ ವೀರ ಪಾಂಡ್ಯ) ಸ್ಥಾಪಿಸಿದನು. ಭಾರತದ ಏಕಶಿಲಾ ಸ್ತಂಭಗಳಲ್ಲೇ ಅತ್ಯುನ್ನತ ಎಂಬ ಕೀರ್ತಿಗೆ ಪಾತ್ರವಾದ ಈ ಸ್ತಂಭವನ್ನು ೧೪೫೫ ರಿಂದ ೧೪೬೫ ರ ಸುಮಾರಿಗೆ ನಿಲ್ಲಸಲಾಯಿತು. ಇದರ ತುದಿಯಲ್ಲಿ ನಾಲ್ಕು ಕಂಬಗಳ ಸಣ್ಣ ಮಂಟಪವಿದೆ. ಈಜಿಪ್ಟ್ ದೇಶದ ಬೃಹತ್ ಶಿಲಾಸ್ತಂಭಗಳಿಗೆ ಇದನ್ನು ಹೋಲಿಸಲಾಗಿದೆ.

**ಶಿಲ್ಪ ಗ್ರಾಮ – ಶಿರವಂತೆ**

ಕೇಂದ್ರ: ಕಾರ್ಕಳ
ದೂರ: ೧.೫ ಕಿ.ಮೀ.



ಶ್ರೀ ಶ್ಯಾಮರಾಯ ಆಚಾರ್ಯರು ಈ ಶಿಲ್ಪ ಗ್ರಾಮದ ಸ್ಥಾಪಕರು ಇಲ್ಲಿ ವಿವಿಧ ರೀತಿಯ ಶಿಲ್ಪ ಕಲಾಕೃತಿಗಳನ್ನು ರಚಿಸಲಾಗುತ್ತಿದೆ.

**ವರಂಗ – ಬಸದಿ**

ಮಾರ್ಗ: ಕಾರ್ಕಳ – ವರಂಗ -ಹೆಬ್ರಿ
ದೂರ: ೨೮ ಕಿ.ಮೀ.



ವರಂಗವು ಚಂದ್ರನಾಥ ಸ್ವಾಮಿಯ ಬಸದಿ, ನೇಮಿನಾಥ ಸ್ವಾಮಿಯ ಬಸದಿ, ಚತುರ್ಮುಖ ಅಥವಾ ಕೆರೆ ಬಸದಿ ಎಂಬ ಜೈನ ಬಸದಿಗಳಿಂದ ಕೂಡಿದೆ. ಇಲ್ಲಿಯ ಎರಡು ಚತುರ್ಮುಖ ಬಸದಿಗಳು ವಿಜಯನಗರ ಶೈಲಿಯಲ್ಲಿವೆ. ನೇಮಿನಾಥ ಬಸದಿಯ ಪ್ರಾಕಾರದ ಹೊರಗೆ, ಜಿಲ್ಲೆಯ ಮೊತ್ತಮೊದಲ ಅತೀ ಪ್ರಾಚೀನವಾದ ೪೫ ಅಡಿ ಎತ್ತರದ ಮಾನಸ್ತಂಭವಿದೆ. ನೇಮಿನಾಥ ಸ್ವಾಮಿಯ ಮುಂಭಾಗದ ಕಪೋತ ಚಾಲುಕ್ಯ ಶೈಲಿಯನ್ನು ಹೋಲುವಂತಿದೆ.

**ಹೆಬ್ರಿ-ಕೂಡ್ಲು ತೀರ್ಥ, ಸೀತಾ ನದಿ ನಿಸರ್ಗಧಾಮ**

ಮಾರ್ಗ: ಉಡುಪಿ -ಹೆಬ್ರಿ -ಆಗುಂಬೆ
ದೂರ: ೪೦ ಕಿ.ಮೀ.



ಕಾರ್ಕಳ ತಾಲೂಕಿನ ಹೆಬ್ರಿಯಿಂದ ಆಗುಂಬೆಯ ಕಡೆಗೆ ಹೋಗುವ ದಾರಿಯಲ್ಲಿ ಸಾಗಿ ಮಣ್ಣಿನ ಮಾರ್ಗದಲ್ಲಿ ೧೦ ಕಿ.ಮೀ. ದೂರ ಹೋದರೆ ಕಣ್ಮನ ಸೆಳೆಯುವ ಕೂಡ್ಲು ತೀರ್ಥ ಜಲಪಾತ ಸಿಗುತ್ತದೆ. ಸಾಧಾರಣ ೧೫೦ ಅಡಿ ಎತ್ತರದಿಂದ ಒಂದೇ ಧಾರೆಯಾಗಿ ಧುಮುಕುವ ಈ ವರ್ಣರಂಜಿತ ಜಲಪಾತವು ಸೀತಾನದಿಯಿಂದ ನಿರ್ಮಿತವಾಗಿದೆ. ಚಾರಣರ ದಣಿವನ್ನು ನಿವಾರಿಸುವ ಸುಂದರ ವಿಹಾರ ತಾಣವಿದು. ಇದೇ ದಾರಿಯಲ್ಲಿ ಸಿಗುವ ಸೀತಾನದಿ ನಿಸರ್ಗಧಾವೂ ರಮಣೀಯವಾಗಿದೆ.



ಸೀತಾ ನದಿ ರಾಫ್ಟಿಂಗ್ ಕ್ರೀಡೆ ಇದು ಚಾರಣ ಪ್ರೀಯರಿಗೆ ಜಲಕ್ರೀಡೆಯಾಗಿದೆ. ಸೋಮೇಶ್ವರ ವನ್ಯಜೀವಿ ಧಾಮವನ್ನು ಈ ಭಾಗದಲ್ಲಿ ವೀಕ್ಷಿಸಬಹುದಾಗಿದೆ.

**ಕಾಂತವರ – ದೇವಸ್ಥಾನ**

ಮಾರ್ಗ: ಕಾರ್ಕಳ – ಬೆಳುವಾಯಿ -ಕಾಂತಾವರ
ದೂರ: ೧೧ ಕಿ.ಮೀ.



ಇದು ಕಾರ್ಕಳ ತಾಲೂಕಿನ ದಕ್ಷಿಣ ಭಾಗದಲ್ಲಿರುವ ಕಾಂತಾವರ ಗ್ರಾಮದಲ್ಲಿದೆ. ವಿಶಾಲವಾದ ಈ ಪುರಾತನ ದೇವಾಲಯವು ಪ್ರಸಿದ್ಧವಾಗಿದೆ. ಇಲ್ಲಿಯ ಶಿವಲಿಂಗವು ವಿಶಿಷ್ಟವಾಗಿದ್ದು ಬೇರೆ ಬಣ್ಣಗಳನ್ನು ಪಡೆಯುವುದು ಇದರ ವಿಶೇಷತೆ.

**ಅತ್ತೂರು – ಸಂತ ಲಾರೆನ್ಸ್ ಚರ್ಚ್**

ಮಾರ್ಗ: ಕಾರ್ಕಳ – ಅತ್ತೂರು
ದೂರ: ೪ ಕಿ.ಮೀ.



ಸರ್ವಧರ್ಮ ಸಮನ್ವತೆಯ ಕೇಂದ್ರವಾಗಿ ರೂಪುಗೊಂಡ ಪವಾಡ ಪುರುಷ ಸಂತ ಲಾರೆನ್ಸರು ನೆಲೆನಿಂತ ಕಾರಣಿಕ ತಾಣ. ಪರ್ಪಲೆ ಗುಡ್ಡದ ಕೆಳಗೆ ಇರುವ ಕ್ರೈಸ್ತರ ಪ್ರಾಚೀನವಾದ ಅತ್ತೂರು ಚರ್ಚ್ ೧೭೫೯ ರ ಮೊದಲೇ ಸ್ಥಾಪಿತವಾಗಿತ್ತು. ಪ್ರತಿ ವರ್ಷದ ಜನವರಿ ತಿಂಗಳ ಕೊನೆಯ ಮಂಗಳವಾರ, ಬುಧವಾರ, ಗುರುವಾರದಂದು ಜರುಗುವ "ಸಾಂತ್ ಮಾರಿ" ಜಾತ್ರೆಯಲ್ಲಿ ಲಕ್ಷಕ್ಕೂ ಮಿಕ್ಕಿದ ಊರ, ಪರವೂರ ಯಾತ್ರಾರ್ಥಿಗಳು ಪಾಲ್ಗೊಳ್ಳುತ್ತಾರೆ.

**ಮಿಯ್ಯಾರು – ಸಿ.ಇ. ಕಾಮತ್ ಕರಕುಶಲ ತರಬೇತಿ ಕೇಂದ್ರ**

**(೦೮೨೫೮-೨೭೨೫೫೨)**
ಮಾರ್ಗ: ಕಾರ್ಕಳ – ಮಿಯ್ಯಾರು – ಬಿಜಗೋಳಿ
ದೂರ: ೭ ಕಿ.ಮೀ.



ಗ್ರಾಮೀಣ ಅಭಿವೃದ್ಧಿ ಟ್ರಸ್ಟ್ ವತಿಯಿಂದ ಪ್ರವರ್ತಕವಾಗಿರುವ ಈ ಸಂಸ್ಥೆ ಆಸಕ್ತಿಯುಳ್ಳ ಸ್ವಉದ್ಯೋಗಿಗಳಿಗೆ ತರಬೇತಿ ನೀಡುತ್ತದೆ. ೧೮ – ೨೫ ವರ್ಷದೊಳಗಿನ ಕನಿಷ್ಠ ೭ನೇ ತರಗತಿ ಪಾಸಾದ ಯುವಕರು ಮರ, ಮಣ್ಣು ಮತ್ತು ಶಿಲ್ಪ ಕಲೆ ಬಗ್ಗೆ ಇಲ್ಲಿ ಉಚಿತ ಊಟ ವಸತಿಯೊಂದಿಗೆ ತರಬೇತಿ ಪಡೆಯಬಹುದುದಾಗಿದೆ.

**ನಿಟ್ಟೆ ವಿದ್ಯಾ ಸಂಸ್ಥೆಗಳು**

ಮಾರ್ಗ: ಕಾರ್ಕಳ – ನಿಟ್ಟೆ – ಪಡುಬದ್ರಿ
ದೂರ: ೮ ಕಿ.ಮೀ.



ವಿವಿಧ ತಾಂತ್ರಿಕ ವೈದ್ಯಕೀಯ ಹಾಗೂ ಇನ್ನಿತರ ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ ಇದೊಂದು ಶಿಕ್ಷಣ ಕೇಂದ್ರ.

# ಉಡುಪಿ ತಾಲ್ಲೂಕು ಪ್ರವಾಸಿ ತಾಣಗಳು

ಮಲ್ಯಾಡಿ ಪಕ್ಷಿಧಾಮ, ಜಪ್ತಿ – ಪುರಸಭಾ ಕುಡಿಯುವ ಯೋಜನಾಗಾರ, ವಕ್ವಾಡಿ – ಶ್ರೀ ವಾದಿರಾಜ ಮಠ ಹೂವಿನ ಕೆರೆ, ಗುಡ್ಡಟ್ಟು – ವಿನಾಯಕ, ಬಸ್ರೂರು – ಮಹಾಲಿಂಗೇಶ್ವರ, ಕೊಲ್ಲೂರು -ಕೊಲ್ಲೂರು ಮೂಕಾಂಬಿಕ ದೇವಸ್ಥಾನ, ಕೊಲ್ಲೂರು – ಅರಿಸಿನ ಗುಂಡಿ, ಕೊಲ್ಲೂರು – ಬೆಳ್ಕಲ್ ತೀರ್ಥ, ಕೊಲ್ಲೂರು – ಆನೆ ಝರಿ, ಬೈಂದೂರು ಸೇನೇಶ್ವರ ದೇವಾಲಯ, ಬೈಂದೂರು, ಯಡ್ತರೆ – ಅಬ್ಬೀಫಾಲ್ಸ್, ಹಟ್ಟಿಯಂಗಡಿ – ವಿನಾಯಕ

**ಮಲ್ಯಾಡಿ ಪಕ್ಷಿಧಾಮ**

ಮಾರ್ಗ : ಕುಂದಾಪುರ-ತೆಕ್ಕಟ್ಟೆ-ಮಲ್ಯಾಡಿ
ದೂರ: ೧೦ ಕಿ.ಮೀ.



ವಿವಿಧ ಜಾತಿಯ, ವಿವಿಧ ಬಣ್ಣದ ದೇಶಗಳ ಹಲವು ಬಗೆಯ ಪಕ್ಷಿಗಳನ್ನು ಕಾಣಬಹುದು. ಈ ಪಕ್ಷಿಧಾಮದಲ್ಲಿ ದೊಡ್ಡ ಬೆಳ್ಳಕ್ಕಿ, ಮಧ್ಯಮ ಬೆಳ್ಳಕ್ಕಿ, ಕೊಳದ ಬಕ, ಬತ್ತಕ್ಕಿ, ಹಸುಬೆಳ್ಳಕ್ಕಿ, ಜಾನುಬೆಳ್ಳಕ್ಕಿ, ಜೌಗು ಹಕ್ಕಿ, ರಾತ್ರಿ ಬಕ, ಬಂಡೆ ಬಕ, ಬೂದು ಬಕ, ನೀರು ಕಾಗೆ, ಜೌಡಮೂಲಿ ಗಿಡುಗ, ಬಿಳಿ ತಲೆ ಗಿಡುಗ, ಕತ್ತರಿ ಬಾಲದ ಕಾಜಾಣ, ತಂತು ಬಾಲದ ಕಾಜಾಣ, ನೀಲಿ ಬಣ್ಣದ ಮಿಂಚುಳ್ಳಿ, ಬಿಳಿ ಎದೆ ಮಿಂಚುಳ್ಳಿ, ಸೀಳು ಕೂಗಿನ ನೀರು ಗುಟುಕ ಶಿಖೆಬಾತು, ತುರಾಯಿ ನೆಲಗುಬ್ಬಿ, ಕೆನ್ನೀಲಿ ನಾಮ ಕೋಳಿ, ಗೊರವಂಕ, ಗುಳುಮುಳಕ್, ಬಿಳಿಬಾತು, ಕಪ್ಪು ಬಿಳಿ ಸಿಪೆಲ್, ಕೆಂಪು ದ್ವಾರದ ಪಿಕಳಾರ, ಕೆಂಪು ಕಪಾಳದ ಪಿಕಳಾರ ಸೇರಿದಂತೆ ಹಲವು ಬಗೆಯ ಪಕ್ಷಿಗಳಿವೆ. ಕುಂದಾಪುರದ ಫ್ಲೋರಾ & ಫೌನಾ ಕ್ಲಬ್ ಇವುಗಳನ್ನು ದಾಖಲಿಸಿದೆ. ಪಕ್ಷಿ ಪ್ರಿಯರು ಪರಿವೀಕ್ಷಣೆಗಾಗಿ ಆಗಮಿಸುತ್ತಾರೆ.

**ಜಪ್ತಿ – ಪುರಸಭಾ ಕುಡಿಯುವ ಯೋಜನಾಗಾರ**

ಮಾರ್ಗ : ಕುಂದಾಪುರ-ಬಸ್ರೂರು-ಜಪ್ತಿ
ದೂರ: ೧೨ ಕಿ.ಮೀ.





ಕುಡ್ಸೆಂಪ್ ಯೋಜನೆಯಡಿ ಕುಂದಾಪುರ ಪುಸಭೆಗೆ ನೀರೆತ್ತುವ ಪಂಪ್ ಮೂಲಕ ನೀರನ್ನು ಶುದ್ಧೀಕರಿಸಿ ಉತ್ತಮ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಯಾಗಿದೆ. ಇದರ ಮಾದರಿ ಹಾಗೂ ವೈಜ್ಞಾನಿಕ ತಂತ್ರಜ್ಞಾನಗಳನ್ನು ನೋಡಿ ಆನಂದಿಸಬಹುದಾಗಿದೆ.


**ವಕ್ವಾಡಿ – ಶ್ರೀ ವಾದಿರಾಜ ಮಠ ಹೂವಿನ ಕೆರೆ**

ಮಾರ್ಗ : ಕುಂದಾಪುರ-ಕೋಟೇಶ್ವರ-ವಕ್ವಾಡಿ
ದೂರ: ೫ ಕಿ.ಮೀ.

**ಶ್ರೀ ವಾದಿರಾಜ ಗುರು ಸಾರ್ವಭೌಮರ ಜನ್ಮ ಸ್ಥಳ ಹಾಗೂ ದೇವಾಲಯವಿದೆ. ಪ್ರಕೃತಿದತ್ತವಾದ ಸ್ಥಳವಾಗಿದೆ.**

**ಗುಡ್ಡಟ್ಟು – ವಿನಾಯಕ**

ಮಾರ್ಗ : ಕುಂದಾಪುರ-ಕೋಟೇಶ್ವರ-ಹುಣ್ಸೆಮಕ್ಕಿ
ದೂರ: ೧೩ ಕಿ.ಮೀ.




ಹುಣ್ಸೆಮಕ್ಕಿ ಸಮೀಪ, ಮುಂದೆ ದಕ್ಷಿಣಾಭಿಮುಖವಾಗಿ ಶಿರಿಯಾರದತ್ತ ಹಾದುಹೋಗುವ ಈ ರಸ್ತೆಯಲ್ಲಿ ಕಾಣಸಿಗುವುದು. ಬಾವಿಯಾಕಾರದಲ್ಲಿ ತುಂಬಿದ ನೀರಿನ ತಳಭಾಗದಲ್ಲಿ ಗಣಪತಿ ವಿಗ್ರಹವಿದೆ. ಇಲ್ಲಿ ನಡೆಯುವ "ಐರಕೊಡ" ನೀರಿನ ಸೇವೆ ಪವಿತ್ರವಾಗಿದೆ. ನೀರು ಹೊರ ತೆಗೆದ ನಂತರ ಅಷ್ಟೇ ಪ್ರಮಾಣದಲ್ಲಿ ನೀರು ಬಾವಿಯಲ್ಲಿ ತುಂಬಿರುತ್ತದೆ.

**ಬಸ್ರೂರು – ಮಹಾಲಿಂಗೇಶ್ವರ**

ಮಾರ್ಗ : ಕುಂದಾಪುರ-ಬಸ್ರೂರು

ದೂರ: ೬ ಕಿ.ಮೀ.



ಬಸ್ರೂರು ಡಚ್ಚರ ವ್ಯಾಪಾರ ಕೇಂದ್ರ. ಇಲ್ಲಿ ೭ ಕೇರಿಗಳು ೭ ಕೆರೆಗಳು ಹಾಗೂ ಮಹಾಲಿಂಗೇಶ್ವರ ದೇವಸ್ಥಾನವಿದೆ. ಸನಿಹದಲ್ಲಿ ಶಾರದ ಕಾಲೇಜು ಇದೆ. ಹಿಂದೆ ಕರ್ನಾಟಕ ಅರಸರ ಅಧೀನದಲ್ಲಿದ್ದ ರೇವು ಪಟ್ಟಣ ಎಂದು ಹೇಳಲಾಗುತ್ತದೆ.

**ಕೊಲ್ಲೂರು -ಕೊಲ್ಲೂರು ಮೂಕಾಂಬಿಕ ದೇವಸ್ಥಾನ**

ಮಾರ್ಗ : ಉಡುಪಿ – ಕುಂದಾಪುರ
ದೂರ: ೭೬ ಕಿ.ಮೀ.



ಶಂಕರಾಚಾರ್ಯರಿಂದ ಸ್ಥಾಪಿಸಲಾದ ಶಕ್ತಿ ಪೀಠಗಳಲ್ಲಿ ಒಂದಾದ ಮೂಕಾಂಬಿಕ ದೇವಸ್ಥಾನ ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧಿ ಹೊಂದಿದೆ. ಕೇರಳ, ತಮಿಳು ನಾಡು, ಆಂದ್ರ ಹಾಗೂ ದೇಶದ ವಿವಿಧ ಭಾಗಗಳಿಂದ ದಿನವೂ ಸಹಸ್ರಾರು ಭಕ್ತರು ಇಲ್ಲಿಗೆ ಆಗಮಿಸಿ, ಸೌರ್ಪಣಿಕ ನದಿಯಲ್ಲಿ ಸ್ನಾನ ಮಾಡಿ ದೇವಿಯ ದರ್ಶನ ಮಾಡುತ್ತಾರೆ. ದಿನವೂ ಇಲ್ಲಿ ಅನ್ನ ಸಂತರ್ಪಣೆ ನಡೆಯುತ್ತದೆ. ಶಂಕರಾಚಾರ್ಯರ ಶಿಲಾಮೂರ್ತಿ ಹಾಗೂ ಶ್ರೀ ಚಕ್ರಪೀಠ ನೋಡಲು ಸುಂದರ. ಈ ದೇವಾಲಯಕ್ಕೆ ಅಪಾರವಾದ ಆಭರಣ ಸಂಪದವನ್ನು ಕಾಣಿಕೆಯಾಗಿ ನೀಡುತ್ತಾರೆ.

**ಕೊಲ್ಲೂರು – ಅರಿಸಿನ ಗುಂಡಿ**

ಮಾರ್ಗ : ಉಡುಪಿ-ಕುಂದಾಪುರ-ಬೈಂದೂರು
ದೂರ: ೮೪ ಕಿ.ಮೀ.



ಇದು ಕೊಲ್ಲೂರು ಮೂಕಾಂಬಿಕ ಅಭಯಾರಣ್ಯದ ಮಧ್ಯದಲ್ಲಿ ಬಹಳ ಸುಂದರವಾಗಿ ಕಾಣುತ್ತದೆ. ಕಾಡಿನ ಮಧ್ಯೆ ಹಾದು ಹೋಗಬೇಕಾಗಿದೆ. ಇಲ್ಲಿಯ ವಿಶೇಷವೆಂದರೆ ಮಧ್ಯಾಹ್ನ ೧೨ ಗಂಟೆಗೆ ಇಡೀ ಫಾಲ್ಸ್ ಅರಸಿನ ಬಣ್ಣ ಪಡೆಯುತ್ತದೆ. ಇದು ಎಲ್ಲಾ ಕಾಲದಲ್ಲೂ ಹೀಗೆ ಇರುತ್ತದೆ ಎನ್ನಲಾಗಿದೆ.

**ಕೊಲ್ಲೂರು – ಬೆಳ್ಕಲ್ ತೀರ್ಥ**

ಮಾರ್ಗ : ಕುಂದಾಪುರ-ಬೈಂದೂರು
ದೂರ: ೮೭ ಕಿ.ಮೀ.



ಯಾವುದೇ ವಾಹನ ಸಂಚಾರವಿಲ್ಲ. ವರ್ಷವಿಡೀ ನೀರು ಬೀಳುತ್ತದೆ. ಇದಕ್ಕೆ ಹೋವಿಂದ ತೀರ್ಥ ಎಂದೂ ಕರೆಯುತ್ತಾರೆ. ಎಳ್ಳು ಅಮವಾಸ್ಯೆ ದಿನ ವರ್ಷಕ್ಕೊಮ್ಮೆ ಪೂಜೆ ನಡೆಯುತ್ತದೆ.

**ಕೊಲ್ಲೂರು – ಆನೆ ಝರಿ**

ಮಾರ್ಗ : ಕುಂದಾಪುರ-ಕೊಲ್ಲೂರು
ದೂರ: ೮೫ ಕಿ.ಮೀ.

ಕೊಳದ ರೂಪದಲ್ಲಿ ಕಾಣುವ ಈ ತಾಣ ಹಿಂದೆ ಮೂಕಾಂಬಿಕ ಸನ್ನಿಧಿಯಲ್ಲಿ ಆನೆ ಪೋಷಿಸಲು ಆರ್ಥಿಕ ಬವಣೆ ಉಂಟಾಗಿ ಆನೆಯಲ್ಲಿ ಮೋರೆಯಿಟ್ಟಾಗ ಸನ್ನಿಧಿಯ ಆನೆ ಕಾಡಿನ ಮಧ್ಯೆ ಹೋಗಿ ಪ್ರಾಣ ಬಿಟ್ಟಿತು ಎಂಬ ಪ್ರತೀತಿ ಇದೆ. ಇದರೆಂದಾಗಿದಯೆ ಇದು ಆನೆ ಝರಿ. ಇಲ್ಲಿ ರೋಪ್ ವೇ, ದೋಣಿ ವಿಹಾರ, ಔಷಧಿ ಗಿಡಗಳಿವೆ.

**ಬೈಂದೂರು ಸೇನೇಶ್ವರ ದೇವಾಲಯ**

ಮಾರ್ಗ : ಉಡುಪಿ-ಕುಂದಾಪುರ-ಬೈಂದೂರು
ದೂರ: ೭೦ ಕಿ.ಮೀ.



ಬಿಂದು ಮುನಿಯ ಹೆಸರಿನಿಂದಾಗಿ ಬಿಂದುಪುರವಾಗಿ ಬಳಿಕ ಬೈಂದೂರು ಎಂಬ ಹೆಸರು ಬಂದಿದೆ. ಇದು ಹಳೇಬೀಡು ಮಾದರಿಯ ಚಾಲುಕ್ಯ ಶೈಲಿಯ ಶಿಲ್ಪ ಕಲೆಯುಳ್ಳ ದೇವಾಲಯ. ಇಲ್ಲಿ ನಂದಿ ವಿಗ್ರಹವಿದೆ. ಇದು ಪುರಾತನ ಶೈಲಿಯ ದೇವಾಲಯ.

**ಬೈಂದೂರು – ಸೋಮೇಶ್ವರ ಕಡಲ ತೀರ, ಒತ್ತಿನೆಣೆ**

ಮಾರ್ಗ : ಉಡುಪಿ-ಕುಂದಾಪುರ-ಬೈಂದೂರು-ಶಿರೂರು
ದೂರ: ೭೪ ಕಿ.ಮೀ.



ಬೈಂದೂರಿನಿಂದ ಮುಂದೆ ಹೋದರೆ ಕರಾವಳಿ ತೀರದಲ್ಲಿ ನದಿ ಮತ್ತು ಸಮುದ್ರ ಸೇರುವ ಅಳಿವೆ ಇದೆ. ಇದು ಇತಿಹಾಸ ಪ್ರಸಿದ್ಧ ಸೋಮೇಶ್ವರ ಸನ್ನದಿ ಇದೆ. ವಿಶಾಲವಾದ ಸಮುದ್ರ ತೀರ ಪಶ್ಚಿಮ ಘಟ್ಟದ ಪಾದ ತೊಳೆಯುವ ಅರಬ್ಬೀ ಸಮುದ್ರ, ದೇವಸ್ಥನದ ಆವರಣದಲ್ಲಿ ಕಾಶೀತೀರ್ಥ/ನಾಗತೀರ್ಥ ಇದೆ.

ಸುತ್ತಲೂ ಉಪ್ಪು ನೀರು ಇರುವಾಗ ಮಧ್ಯದಲ್ಲಿ ಮಾತ್ರ ಸಿಹಿ ನೀರು ಸಿಗುವುದು ಇಲ್ಲಿನ ವಿಶೇಷ. ಇಲ್ಲಿಂದ ಮೇಲೆ ಒತ್ತನೆಣೆ, ಕ್ಷಿತಿಜಧಾಮಕ್ಕೆ ಹೋಗಲು ಸುಂದರವಾದ ಚಿತ್ರದಲ್ಲಿ ಮೆಟ್ಟಿಲುಗಳನ್ನು ಮಾಡಲಾಗಿದ್ದು ಇಲ್ಲಿ ಪ್ರಕೃತಿ ವೀಕ್ಷಣೆ ಹಾಗೂ ಸೂರ್ಯಾಸ್ತಮಾನ ನೋಡಬಹುದು.

ಚಾರಣ ಪ್ರಿಯರಿಗೆ ಹಾಗೂ ಪ್ರವಾಸಿಗರಿಗೆ ಬಹು ಸುಂದರವಾಗಿದೆ. ಒತ್ತಿನೆಣೆ ಸಮೀಪ ಮ್ಯಾಂಗನೀಸ್/ಬಾಕ್ಸೈಟ್ ಗನಿ ಭೂಭಾಗ ನೋಡಬಹುದು.

**ಯಡ್ತರೆ – ಅಬ್ಬೀಫಾಲ್ಸ್**

ಮಾರ್ಗ: ಉಡುಪಿ- ಕುಂದಾಪುರ- ಬೈಂದೂರು- ತೂದಳ್ಳಿ
ದೂರ: ೬೫ ಕಿ.ಮೀ.





ಬೈಂದೂರಿನ ಯಡ್ತರೆ ಗ್ರಾಮದಲ್ಲಿರುವ ತೂದಳ್ಳಿ ಹತ್ತಿರವಿರುವ ಫಾಲ್ಸ್. ವರ್ಷವಿಡೀ ಬಹಳ ಸುಂದರವಾಗಿ ನೀರನ್ನು ದುಮುಕಿಸುತ್ತದೆ. ಈ ಫಾಲ್ಸ್ ಅನ್ನು ಬೇಸಿಗೆಯಲ್ಲಿ ಮಕ್ಕಳು ಹಾಗೂ ಹಿರಿಯರು ಸ್ನಾನ ಮಾಡುವುದಲ್ಲದೇ ಸುಂದರವಾಗಿ ವೀಕ್ಷಿಸಲು ಅನುಕೂಲವಾಗುತ್ತಿದೆ.

**ಹಟ್ಟಿಯಂಗಡಿ – ವಿನಾಯಕ**

ಮಾರ್ಗ : ಕುಂದಾಪುರ – ತಲ್ಲೂರು
ದೂರ: ೧೨ ಕಿ.ಮೀ.



ಸಂಕಷ್ಟಿಯ ದಿನದಂದು ಇಲ್ಲಿಗೆ ಸಾವಿರಾರು ಭಕ್ತರು ಆಗಮಿಸುತ್ತಾರೆ. ಜಗತ್ಪ್ರಸಿದ್ಧ ದೇವಾಲಯಗಳಲ್ಲಿ ಇದು ಒಂದಾಗಿದೆ. ಇದು ಸಂಪೂರ್ಣ ಶಿಲಾಮಯವಾಗಿದೆ. ದಿನವು ಉಚಿತ ಊಟದ ವ್ಯವಸ್ಥೆ ಇರುತ್ತದೆ. ಇತಿಹಾಸ ಪ್ರಸಿದ್ಧ ಅವಶೇಷಗಳಿವೆ.

**ಕಮಲ ಶಿಲೆ – ಬ್ರಾಹ್ಮಿ ದುರ್ಗಾ ಹಾಗೂ ಗುಹಾಲಯ**

ಮಾರ್ಗ : ಕುಂದಾಪುರ-ಸಿದ್ದಾಪುರ -ಕಮಲ ಶಿಲೆ

ದೂರ: ೩೦ ಕಿ.ಮೀ.



ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಕಮಲಶಿಲೆ ಇದು ಪುರಾತನ ಶೈಲಿಯದ್ದಾಗಿದೆ. ಇಲ್ಲಿನ ಮತ್ತೊಂದು ವಿಶೇಷತೆಯೆಂದರೆ ಗುಹಾಲಯವಿದೆ. ಈ ಗುಹೆಗೆ ಪೂಜೆ ನಡೆಯುತ್ತದೆ. ಅನ್ನ ಸಂತರ್ಪಣೆ ವ್ಯವಸ್ಥೆ ಇದೆ.